ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ: 7 । ಸಂಚಿಕೆ: 5 । ಮೇ–2025 । ಪುಟಗಳು: 20 । ಬೆಲೆ: ರೂ. 25/

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ



## ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ
## ಯಶಸ್ವಿನಿ ಯೋಜನೆ ದರ ಪರಿಷ್ಕರಣೆ ವರದಿ ಸಲ್ಲಿಕೆ

## ಅಂತಾರಾಷ್ಟ್ರೀಯ ಸಹಕಾರ ವರ್ಷ

ಧ್ಯೇಯ: "ಸಹಕಾರ ಸಂಸ್ಥೆಗಳ ಮೂಲಕ ಉತ್ತಮ ಜಗತ್ತನ್ನು ನಿರ್ಮಿಸಲು ಸಾಧ್ಯ"



## ಮೇ 01, ಕಾರ್ಮಿಕ ದಿನಾಚರಣೆ



ಮೈಸೂರಿನ ಅರಸು ಮಂಡಳಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು ಹಾಗೂ ನಿರ್ದೇಶಕರುಗಳು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಎಸ್. ಚಂದ್ರಶೇಖರ್ ರವರನ್ನು ಅಭಿನಂದಿಸಿ ಸನ್ಮಾನಿಸಿದರು.



ಮೈಸೂರಿನ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಆಡಳಿತಮಂಡಳಿ ಸದಸ್ಯರುಗಳು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಎಸ್. ಚಂದ್ರಶೇಖರ್ ರವರನ್ನು ಅಭಿನಂದಿಸಿ ಶುಭ ಹಾರೈಸಿದರು.



ಮೈಸೂರಿನ ಪಿ.ಎಲ್.ಡಿ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆಯಾದ ಕುಮಾರಿ ಆರ್.ಸಿಂಧೂ ರವರು ಪತ್ತಿನ ಮಹಾಮಂಡಳದ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ರವರನ್ನು ಅಭಿನಂದಿಸಿ ಗೌರವಿಸಿದರು.

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

## ಆಡಳಿತ ಮಂಡಳಿ



ಶಿದ್ದನಗೌಡ ಸಂಣರಾಮನಗೌಡ ಪಾಟೀಲ
ಸಹಕಾರಿ ಪಿತಾಮಹ



ಶ್ರೀ ಬಿ.ಎಲ್. ಲಕ್ಕೇಗೌಡರು
ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಸಂಸ್ಥಾಪಕ ಅಧ್ಯಕ್ಷರು



ಎಸ್. ಚಂದ್ರಶೇಖರ್
ಅಧ್ಯಕ್ಷರು



ಧರೇಪ್ಪ ಎಂ. ಆಲಗೂರ
ಉಪಾಧ್ಯಕ್ಷರು



ಸಿ.ಎಂ. ಮಾರೇಗೌಡ
ನಿರ್ದೇಶಕರು



ಡಾ. ಬಿ.ಡಿ. ಭೂಕಾಂತ
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು



ಎಂ.ಜೆ. ನರೇಂದ್ರಕುಮಾರ
ನಿರ್ದೇಶಕರು



ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಉಮೇಶ ಶಿ. ಬಾಳಿ
ನಿರ್ದೇಶಕರು



ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಡಾ. ನಾಗೇಂದ್ರ ಡಿ.ಎಲ್.
ನಿರ್ದೇಶಕರು



ವೈ. ಶ್ರೀನಿವಾಸಗೌಡ
ನಿರ್ದೇಶಕರು



ಜಗದೀಶ ಕಂದಿಕರೆ
ನಿರ್ದೇಶಕರು



ರಾಜೇಶ್ ಟಿ.
ನಿರ್ದೇಶಕರು



ಶಿವಕುಮಾರ ಬಸವರಾಜು ಬಾದವಾಡಗಿ
ನಿರ್ದೇಶಕರು



ಶಿವಾನಂದ ಬಸಪ್ಪ ನ್ಯಾಮಗೌಡ
ನಿರ್ದೇಶಕರು



ಹೆಚ್. ಅಶೋಕ್
ನಿರ್ದೇಶಕರು




ಚಂದ್ರಶೇಖರ್ ಕೋಲ್ಹಾರು
ನಿರ್ದೇಶಕರು



ಪ್ರಜ್ವಲ್ ಕೆ.ಎನ್.
ಮುಖ್ಯಕಾರ್ಯನಿರ್ವಹಣಾಧಿಕಾರಿ


**SAHAKARA VARTHA PATHRIKE KANNADA MONTHLY**
RNI-Reg No.KARKAN/2018/75796
Post Reg No.KA-BGW/1816/2025-27
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 30th of Previous Month
License to post without prepayment
PMG BG/WPP-405/2025-27




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

**Printed at : Biligiri Printers**
**Chamrajpet, Bengaluru - 18**

## ಸಂಪಾದಕೀಯ



ಎಸ್. ಚಂದ್ರಶೇಖರ್
ಅಧ್ಯಕ್ಷರು

ಸಹಕಾರ ವಿಷಯವನ್ನು ಪ್ರಾಥಮಿಕ ಶಿಕ್ಷಣ ಹಂತದಿಂದಲೇ ಮಕ್ಕಳಿಗೆ ಮನವರಿಕೆ ಮಾಡಿಕೊಡುವುದರಿಂದ ಮಕ್ಕಳಲ್ಲಿ ಈ ಕ್ಷೇತ್ರದ ಬಗ್ಗೆ ಅರ್ಥಪೂರ್ಣ ಪರಿಚಯ, -ಬೆಳವಣಿಗೆ ಹಾಗೂ ಸಹಕಾರ ವ್ಯವಸ್ಥೆಯಲ್ಲಿ ಮುಂಬರುವ ದಿನಗಳಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ- ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗಲಿದೆ.

### ಶಾಲಾ ಹಂತದಲ್ಲಿ ಸಹಕಾರ ಪಠ್ಯ ಸೇರ್ಪಡೆ ಸ್ವಾಗತಾರ್ಹ ನಡೆ

ವಿಶ್ವದ ಸಹಕಾರ ಚಳವಳಿ ಗಮನ ಸೆಳೆಯುತ್ತಿದೆ. ಭಾರತ ವಿಶ್ವದಲ್ಲಿಯೇ ಅತಿ ಹೆಚ್ಚು ಸದಸ್ಯರು ಮತ್ತು ಸಹಕಾರ ಸಂಘಗಳನ್ನು ಹೊಂದಿರುವ ರಾಷ್ಟ್ರ ಎಂಬ ಖ್ಯಾತಿ ಗಳಿಸಿದೆ.

ಹಾಲು ಉತ್ಪಾದನೆಯಲ್ಲಿ ವಿಶ್ವದಲ್ಲಿಯೇ ಪ್ರಥಮ ಸ್ಥಾನದಲ್ಲಿರುವುದು ಹೆಮ್ಮೆಯ ವಿಚಾರ. ಆಹಾರ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡುವ ಉದ್ದೇಶದಿಂದ ರಾಜ್ಯದ ಕೃಷಿ ಪತ್ತಿನ ವ್ಯವಸ್ಥೆಯನ್ನು ಬಲಪಡಿಸಲು ರಾಜ್ಯ ಸರ್ಕಾರದ ಆರ್ಥಿಕ ಪ್ರೋತ್ಸಾಹದೊಂದಿಗೆ ಕೃಷಿಕರಿಗೆ ಸಹಕಾರ ಸಂಘಗಳ ಮೂಲಕ ಶೂನ್ಯ ಬಡ್ಡಿದರದಲ್ಲಿ ಬೆಳೆ ಸಾಲವನ್ನು ಗರಿಷ್ಠ ಪ್ರಮಾಣದಲ್ಲಿ ವಿತರಿಸುತ್ತಿರುವುದು ದಾಖಲಾರ್ಹವಾಗಿದೆ.

ಸಹಕಾರ ಚಳವಳಿಯ ಬೆಳವಣಿಗೆ ಪ್ರತಿ ವರ್ಷ ಹೆಚ್ಚುತ್ತಲೇ ಇದೆ. ಆದರೂ ಕೆಲವು ಸಂಸ್ಥೆಗಳಲ್ಲಿ ಹಲವು ಕಾರಣಗಳಿಂದ ನಷ್ಟವಾಗಿ ಮುಚ್ಚುವ ಸ್ಥಿತಿಗೆ ಬಂದಿರುವ ಉದಾಹರಣೆಗಳು ಇವೆ. ಆದರೂ ಸಹಕಾರ ಚಳುವಳಿಯನ್ನು ಬಲಪಡಿಸುವ ಉದ್ದೇಶ ಹಾಗೂ ಈ ಬಗ್ಗೆ ಯುವಜನತೆಗೆ ಅರಿವು ಮೂಡಿಸಬೇಕಾದದ್ದು ನಮ್ಮೆಲ್ಲರ ಹೊಣೆಯೂ ಇದೆ.

ಯುವಜನರು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳಲು ಹಾಗೂ ಸಿಗುವ ಸವಲತ್ತುಗಳನ್ನು ಪಡೆದು ಆರ್ಥಿಕ ಸ್ವಾವಲಂಬನೆಗೆ ಸಹಕಾರ ಕ್ಷೇತ್ರ ಹೆಮ್ಮರವಾಗಿ ಬೆಳೆದು ನಿಂತಿದೆ.

ಈ ನಿಟ್ಟಿನಲ್ಲಿ ಯುವಜನರಿಗೆ ಶಾಲಾ–ಕಾಲೇಜು ಪಠ್ಯಗಳಲ್ಲಿ ಸಹಕಾರ ಕ್ಷೇತ್ರದ ಪರಿಕಲ್ಪನೆ, ಮಹತ್ವ–ಸಾಧನೆಗಳು, ಪ್ರಯೋಜನಗಳು ಹೀಗೆ ಹಲವು ರೀತಿಯಲ್ಲಿ ಜಾಗೃತಿ –ಅರಿವು ಮೂಡಿಸಬೇಕಾಗಿದೆ.

ಈ ಕಾರಣಗಳಿಂದ ಕೇಂದ್ರ ಸರ್ಕಾರ ರಾಷ್ಟ್ರೀಯ ಶಿಕ್ಷಣ ಸಮಿತಿಯ ಸಲಹೆ –ಸೂಚನೆಗಳ ಮೇಲೆ ಆರನೆಯ ತರಗತಿಯ ಪಠ್ಯದಲ್ಲಿ ಸಹಕಾರ ವಿಷಯ ಕುರಿತು ಒಂದು ಅಧ್ಯಾಯ ಸೇರ್ಪಡೆ ಮಾಡಲು ತೀರ್ಮಾನಿಸಿ ಅನುಷ್ಠಾನಗೊಳಿಸಲು ಮುಂದಾಗಿದೆ. ಇದು ಸ್ವಾಗತ ಕ್ರಮವಾಗಿದೆ.

ಸಹಕಾರ ವಿಷಯವನ್ನು ಪ್ರಾಥಮಿಕ ಶಿಕ್ಷಣ ಹಂತದಿಂದಲೇ ಮಕ್ಕಳಿಗೆ ಮನವರಿಕೆ ಮಾಡಿಕೊಡುವುದರಿಂದ ಮಕ್ಕಳಲ್ಲಿ ಈ ಕ್ಷೇತ್ರದ ಬಗ್ಗೆ ಅರ್ಥಪೂರ್ಣ ಪರಿಚಯ –ಬೆಳವಣಿಗೆ ಹಾಗೂ ಸಹಕಾರ ವ್ಯವಸ್ಥೆಯಲ್ಲಿ ಮುಂಬರುವ ದಿನಗಳಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ–ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಸಾಧ್ಯವಾಗಲಿದೆ.

ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ಇತ್ತ ಗಮನ ಹರಿಸಬೇಕಾಗಿದೆ ಇದಕ್ಕೂ ಮುನ್ನ ರಾಜ್ಯದ ಸಹಕಾರಿ ಮುಖಂಡರುಗಳು ಸರ್ಕಾರವನ್ನು ಈ ಬಗ್ಗೆ ಆಗ್ರಹಿಸಬೇಕಾಗಿದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಸಂಪಾದಕ ಮಂಡಳಿ

ಅಧ್ಯಕ್ಷರು / ಪ್ರಧಾನ ಸಂಪಾದಕರು :

ಎಸ್. ಚಂದ್ರಶೇಖರ್

ಸಂಪಾದಕರು :

ಪ್ರಜ್ವಲ್ ಕೆ.ಎನ್.

ಮುಖ್ಯಕಾರ್ಯನಿರ್ವಹಣಾಧಿಕಾರಿ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್, ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

ದೂರವಾಣಿ ಸಂಖ್ಯೆ : 080–23564444 / 23464033 / 23464034

ಇ–ಮೇಲ್ : info@ksccsf.org, ksccsfltd@gmail.com, ವೆಬ್ : www.ksccsf.org

# ದೇಶದ ಮೊದಲ ಸಹಕಾರಿ ವಿಶ್ವವಿದ್ಯಾಲಯ "ತ್ರಿಭುವನ ಸಹಕಾರಿ ವಿಶ್ವವಿದ್ಯಾಲಯ" ಮಸೂದೆ ಅಂಗೀಕಾರ



Amit Shah, Minister of Cooperation

ನವದೆಹಲಿ : ಭಾರತದ ಮೊದಲ ಸಹಕಾರಿ ವಿಶ್ವವಿದ್ಯಾಲಯ "ತ್ರಿಭುವನ ಸಹಕಾರಿ ವಿಶ್ವವಿದ್ಯಾಲಯ" ಮಸೂದೆಯು ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಅಂಗೀಕಾರಗೊಂಡಿದೆ. ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು ಲೋಕಸಭೆಯಲ್ಲಿ ಮಂಡಿಸಿ, ಮಸೂದೆಗೆ ಅಂಗೀಕಾರ ಪಡೆದರು. ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಯಾಗಿ ಗುರುತಿಸಲ್ಪಡುವ ಈ ವಿಶ್ವವಿದ್ಯಾನಿಲಯವು, ಸರ್ಕಾರದ "ಸಹಕಾರ ಸೇ ಸಮೃದ್ಧಿ" (ಸಹಕಾರದ ಮೂಲಕ ಸಮೃದ್ಧಿ) ದೃಷ್ಟಿಕೋನಕ್ಕೆ ಅನುಗುಣವಾಗಿ, ಸಹಕಾರಿ ಸಂಸ್ಥೆಗಳಿಗೆ ತಾಂತ್ರಿಕ ಮತ್ತು ನಿರ್ವಹಣಾ ಶಿಕ್ಷಣದಲ್ಲಿ ಪರಿಣತಿಯನ್ನು ನೀಡಲು ಸಹಾಯಕವಾಗಲಿದೆ. ಸಹಕಾರ ಕುರಿತು ಸಂಶೋಧನೆ, ಅಭಿವೃದ್ಧಿ ಮತ್ತು ಸಾಂಸ್ಥಿಕ ಜಾಲಗಳನ್ನು ಹೊಂದುವ ಮೂಲಕ ಭಾರತದ ಸಹಕಾರಿ ಚಳವಳಿಯನ್ನು ಬಲಪಡಿಸುವ ಗುರಿಯನ್ನು ಹೊಂದಿದೆ.

ದೇಶದ ಸಹಕಾರಿ ಇತಿಹಾಸದಲ್ಲಿ ಸಹಕಾರ ವಿಶ್ವವಿದ್ಯಾಲಯ ಒಂದು ಮೈಲಿಗಲ್ಲು, ಇದು ಸಹಕಾರಿ ಸಂಸ್ಥೆಗಳು ವಿಶ್ವ ದರ್ಜೆಯ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಯ ಮೂಲಕ ಕಾರ್ಪೊರೇಟ್ ಸಂಸ್ಥೆಗಳೊಂದಿಗೆ ಸ್ಪರ್ಧಿಸಲು ಅವಕಾಶ ನೀಡುತ್ತದೆ ಹಾಗೂ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವಲ್ಲಿ, ಸ್ವ–ಉದ್ಯೋಗವನ್ನು ಉತ್ತೇಜಿಸುವಲ್ಲಿ ಮತ್ತು ಸಣ್ಣ ಉದ್ಯಮಗಳನ್ನು ಪೋಷಿಸುವಲ್ಲಿ ವಿಶ್ವವಿದ್ಯಾಲಯ ಪ್ರಮುಖ ಪಾತ್ರ ವಹಿಸಲಿದೆ ಎಂದು ಅವರು ಹೇಳಿದ್ದಾರೆ.

ವಾರ್ಷಿಕವಾಗಿ 8 ಲಕ್ಷ ಜನರು ಸಹಕಾರಿ ಡಿಪ್ಲೊಮಾ, ಪದವಿ ಅಥವಾ ಪ್ರಮಾಣಪತ್ರಗಳೊಂದಿಗೆ ಪದವಿ ಪಡೆಯುವಾಗ, ಅದು ಸಹಕಾರಿ ಚಳುವಳಿಗೆ ಹೊಸ ಚೈತನ್ಯ ನೀಡುತ್ತದೆ ಎಂದು ಅವರು ಹೇಳಿದರು.

**ಸುಭಾಷಿತ :** ಎಲ್ಲರನ್ನೂ ಮೆಚ್ಚಿಸುವಂತೆ ಬದುಕುವ ಕಲೆಯನ್ನು ನೀನು ರೂಢಿಸಿಕೊಂಡ ದಿನವೇ ನಿನ್ನ ಕೊನೆಯ ದಿನವಾಗುವುದು. – ಪಿ. ಲಂಕೇಶ್

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

ಸೂಚನೆ :
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.



# ಯಶಸ್ವಿನಿ ಯೋಜನೆ ಚಿಕಿತ್ಸಾ ದರ ಪರಿಷ್ಕರಣೆಗೆ ಸಮಿತಿ ಶಿಫಾರಸ್ಸು

**ಬೆಂಗಳೂರು:** ಅಪ್ರಸ್ತುತ ಎನಿಸಿರುವ ಆರು ಚಿಕಿತ್ಸೆಗಳನ್ನು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ ಕೈಬಿಡುವ ಜತೆಗೆ ಕ್ಯಾನ್ಸರ್, ಇಂಟರ್‌ವೆನ್ಷನಲ್ ರೇಡಿಯಾಲಜಿ, ಸಿಟಿವಿಎಸ್ ಸೇರಿದಂತೆ 69 ಹೊಸ ಚಿಕಿತ್ಸೆಗಳನ್ನು ಸೇರ್ಪಡೆ ಒಳಗೊಂಡಂತೆ ಚಿಕಿತ್ಸಾ ದರ ಪರಿಷ್ಕರಣೆಗೆ ಶಿಫಾರಸ್ಸು ಸಹಿತ ವರದಿಯನ್ನು ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಅಧ್ಯಕ್ಷತೆಯ ತಜ್ಞರನ್ನು ಒಳಗೊಂಡ ದರ ಪರಿಷ್ಕರಣೆ ಸಮಿತಿ ಮುಖ್ಯಮಂತ್ರಿಗಳಿಗೆ ಸಲ್ಲಿಸಿದೆ.

ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿ ಚಿಕಿತ್ಸೆಗಳಿಗೆ 2017–18ನೇ ಸಾಲಿನಲ್ಲಿ ನಿಗದಿಯಾಗಿದ್ದ ದರಗಳು ಪರಿಷ್ಕರಣೆಯಾಗಿರಲಿಲ್ಲ. ಆ ಹಿನ್ನೆಲೆಯಲ್ಲಿ ಶಾಸಕ ಶ್ರೀನಿವಾಸ್ ಅವರ ಅಧ್ಯಕ್ಷತೆಯಲ್ಲಿ ತಜ್ಞರನ್ನು ಒಳಗೊಂಡ ದರ ಪರಿಷ್ಕರಣೆ ಸಮಿತಿ ರಚಿಸಲಾಗಿತ್ತು. ಅದರಂತೆ ಏಪ್ರಿಲ್ 22ರಂದು ಶಾಸಕರಾದ ಶ್ರೀನಿವಾಸ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಿಫಾರಸ್ಸು ಒಳಗೊಂಡ ವರದಿ ಸಲ್ಲಿಸಿದರು. ಈ ವೇಳೆ ಸಚಿವ ಕೆ.ಎನ್. ರಾಜಣ್ಣ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ ಕೆ. ಮಣಿವಣ್ಣನ್, ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್, ಯಶಸ್ವಿನಿ ಟ್ರಸ್ಟ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ. ವೆಂಕಟಸ್ವಾಮಿ, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್, ಅಪರ ನಿಬಂಧಕರಾದ ಬಿ.ಆರ್. ಲಿಂಗರಾಜು ಅವರುಗಳು ಉಪಸ್ಥಿತರಿದ್ದರು.

ಕೆಲ ಚಿಕಿತ್ಸೆಗಳಿಗೆ ಯಥಾಸ್ಥಿತಿ ದರ ಮುಂದುವರಿಸಿದ್ದರೆ. ಇನ್ನಷ್ಟು ಚಿಕಿತ್ಸೆಗಳಿಗೆ ಶೇ.15– 20ರಷ್ಟು, ಕೆಲವಕ್ಕೆ ಶೇ.25ರಷ್ಟು ಹಾಗೂ ಆಯ್ದ ಸುಧಾರಿತ ಚಿಕಿತ್ಸೆ ದರವನ್ನು ಶೇ.100ರಿಂದ ಶೇ.200ರಷ್ಟು ಹೆಚ್ಚಳಕ್ಕೆ ಶಿಫಾರಸ್ಸು ಮಾಡಲಾಗಿದೆ.

ಸಹಕಾರ ಸಚಿವ ಕೆ.ಎನ್. ರಾಜಣ್ಣ ರವರು ಮಾತನಾಡಿ, ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗೆ ರಾಜ್ಯದ ಪೌರಕಾರ್ಮಿಕರು ಮತ್ತು ದೇವದಾಸಿಯರನ್ನು ಸೇರ್ಪಡೆಗೊಳಿಸಲು ಚಿಂತಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಸಂದರ್ಭದಲ್ಲಿ ತಿಳಿಸಿದರು.

ಸಹಕಾರ ಸಂಘಗಳ ಸದಸ್ಯರಿಗೆ ಆರೋಗ್ಯ ಸೇವೆ ಕಲ್ಪಿಸುವ ಪರಿಷ್ಕೃತ ಯಶಸ್ವಿನಿ ಯೋಜನೆ 2022– 23ನೇ ಸಾಲಿನಿಂದ ಮರು ಜಾರಿಯಾಗಿದೆ. ಸದ್ಯ ಯೋಜನೆಯಡಿ ಚಿಕಿತ್ಸೆಗಳಿಗೆ 2017– 18ನೇ ಸಾಲಿನಲ್ಲಿದರ ನಿಗದಿಯಾಗಿತ್ತು. ಆ ದರಗಳನ್ನು ಇಂದಿನ ಮಾರುಕಟ್ಟೆ ದರಗಳಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಎಂಬ ಕಾರಣಕ್ಕೆ ಆಸ್ಪತ್ರೆಗಳು ಯೋಜನೆಯಡಿ ನೆಟ್‌ವರ್ಕ್ ಆಸ್ಪತ್ರೆಗಳಾಗಿ ಸೇವೆ ಒದಗಿಸಲು ಆಸಕ್ತಿ ತೋರುತ್ತಿರಲಿಲ್ಲ.

ಪ್ರಸ್ತುತ ಚಿಕಿತ್ಸಾ ದರಗಳನ್ನು ಪರಿಶೀಲಿಸಿ ಸದ್ಯದ ಪರಿಸ್ಥಿತಿಗೆ ಅನುಗುಣವಾಗಿ ಸಹಕಾರ ಸಂಸ್ಥೆಗಳ ಸದಸ್ಯರಿಗೆ ಅನುಕೂಲವಾಗುವಂತೆ ಅಗತ್ಯವಿದ್ದರೆ ಹೊಸ ಚಿಕಿತ್ಸೆಗಳನ್ನು ಸೇರಿಸುವ ಜತೆಗೆ ಸದ್ಯದ ಸ್ಥಿತಿಗತಿಗೆ ಪೂರಕವಾಗಿ ಚಿಕಿತ್ಸಾ ದರಗಳ ಪರಿಷ್ಕರಣೆಗೆ ಶಿಫಾರಸ್ಸು ಸಲ್ಲಿಸುವಂತೆ ಸರಕಾರ ಆದೇಶದಲ್ಲಿ ತಿಳಿಸಿತ್ತು.

ಅದರಂತೆ ಸಮಿತಿಯಲ್ಲಿ ಪ್ರತಿಷ್ಠಿತ ಆಸ್ಪತ್ರೆಗಳ 8 ಮಂದಿ ತಜ್ಞ ವೈದ್ಯರ ಜತೆಗೆ ನಾನಾ ವೈದ್ಯಕೀಯ ವಿಭಾಗಗಳ 11 ವಿಶೇಷ ಆಹ್ವಾನಿತ ತಜ್ಞ ವೈದ್ಯರೊಂದಿಗೆ 13 ಸಭೆಗಳನ್ನು ನಡೆಸಿ ಪಡೆದ ಸಲಹೆ, ಸೂಚನೆ

ಆಧರಿಸಿ ಸಮಿತಿ ದರ ಪರಿಷ್ಕರಣೆಗೆ ಶಿಫಾರಸ್ಸು ಮಾಡಿದೆ.

**ಶಿಫಾರಸ್ಸಿನ ಪ್ರಮುಖ ಅಂಶಗಳು ಏನು?**

ಯಶಸ್ವಿನಿ ಯೋಜನೆಯಡಿ 2128 ಚಿಕಿತ್ಸೆಗಳನ್ನು ಅಳವಡಿಸಿಕೊಂಡಿದ್ದು, ಸದ್ಯಕ್ಕೆ ಅಪ್ರಸ್ತುತವೆನಿಸುವ 6 ಚಿಕಿತ್ಸೆಗಳನ್ನು ತಜ್ಞರ ಸಲಹೆಯಂತೆ ಕೈಬಿಡಲಾಗಿದೆ

ಇತ್ತೀಚಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಹೊಸದಾಗಿ ಪ್ರವರ್ಧಮಾನಕ್ಕೆ ಬಂದಿರುವ ಚಿಕಿತ್ಸೆಗಳ ಪೈಕಿ ಸಹಕಾರಿಗಳು/ರೈತಾಪಿ ವರ್ಗಕ್ಕೆ ಅಗತ್ಯವಾದ 'ಇಂಟರ್‌ವೆನ್ಷನಲ್ ರೇಡಿಯಾಲಜಿ', ಸಿಟಿವಿಎಸ್, ಕ್ಯಾನ್ಸರ್ ಕಾಯಿಲೆ ಸೇರಿದಂತೆ ನಾನಾ ವಿಭಾಗಗಳ ಒಟ್ಟು 69 ಹೊಸ ಚಿಕಿತ್ಸೆಗಳನ್ನು ತಜ್ಞರ ಸಲಹೆಯಂತೆ ಸೇರ್ಪಡೆ ಆ ಮೂಲಕ ಯೋಜನೆಯಡಿ ಒಟ್ಟು 2191 ಚಿಕಿತ್ಸೆಗಳಿಗೆ ಅವಕಾಶ ಕಲ್ಪಿಸಿದಂತಾಗಿದೆ

ಯಶಸ್ವಿನಿ ಯೋಜನೆಯಡಿ 2024-25ರಲ್ಲಿ 68,159 ಫಲಾನುಭವಿಗಳು 117.79 ಕೋಟಿ ರೂ. ಮೊತ್ತದ ಚಿಕಿತ್ಸೆ ಪಡೆದಿದ್ದು ಸರಾಸರಿ ಒಂದು ಚಿಕಿತ್ಸೆಗೆ 17,000 ರೂ. ತಗಲುತ್ತದೆ. ಪ್ರಸಕ್ತ ಆರ್ಥಿಕ ವರ್ಷದಲಿ 75,000 ಫಲಾನುಭವಿಗಳು ಚಿಕಿತ್ಸೆ ಪಡೆಯುವ ಅಂದಾಜು ಇದ್ದು, 127.50 ಕೋಟಿ ರೂ. ವೆಚ್ಚದ ಅಂದಾಜು ಇದೆ

ಆರೋಗ್ಯ ಸೇವೆಯಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಉನ್ನತ ಮಟ್ಟದ ಚಿಕಿತ್ಸೆಗಳನ್ನು ಹೊಸದಾಗಿ ಸೇರಿಸುವುದರಿಂದ ಸರಾಸರಿ ಚಿಕಿತ್ಸಾ ದರದಲ್ಲಿ ಶೇ.50ರಿಂದ ಶೇ.55ರವರೆಗೆ ದರ ಹೆಚ್ಚಳವಾಗುವ ಅಂದಾಜು ಇದೆ. ಇದಕ್ಕಾಗಿ 70 ಕೋಟಿ ರೂ.ರವರೆಗೆ ದರ ಹೆಚ್ಚಳವಾಗುವ ನಿರೀಕ್ಷೆಯಿದ್ದು, 62.50 ಕೋಟಿ ರೂ.ನಿಂದ 68.75 ಕೋಟಿ ರೂ. ಹೆಚ್ಚಿನ ಹೊರೆ ಬೀಳುವ ಸಂಭವವಿರುತ್ತದೆ

ಹೆಚ್ಚುವರಿ 70 ಕೋಟಿ ರೂ. ಆರ್ಥಿಕ ಹೊರೆ ಭರಿಸಲು ಸರಕಾರದಿಂದ 40 ಕೋಟಿ ರೂ. ಹೆಚ್ಚುವರಿ ಅನುದಾನವನ್ನು ಒದಗಿಸಿದರೆ, ಬಾಕಿ 30 ಕೋಟಿ ರೂ.ಗಳನ್ನು ಸದಸ್ಯರು ಪಾವತಿಸುವ ವಂತಿಗೆಯಿಂದ ಭರಿಸಿ ಯೋಜನೆ ಜಾರಿಗೊಳಿಸಬಹುದು

**ಗಂಭೀರ ಸಮಸ್ಯೆಗಳ ಚಿಕಿತ್ಸೆ ದರ ಪರಿಷ್ಕರಣೆ**

ಸದ್ಯದ ಮಾರುಕಟ್ಟೆ ದರವನ್ನು ಆಧರಿಸಿ ಚಿಕಿತ್ಸಾ ದರ ಪರಿಷ್ಕರಣೆಗೆ ಶಿಫಾರಸ್ಸು ಮಾಡಲಾಗಿದೆ. ಕೆಲ ಚಿಕಿತ್ಸೆ ದರವನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಿದ್ದರೆ ಕೆಲ ಚಿಕಿತ್ಸೆಗಳ ದರ ಶೇ.15, ಶೇ.25, ಶೇ.50ರಷ್ಟು ಹೆಚ್ಚಳಕ್ಕೆ ಸಲಹೆ ನೀಡಲಾಗಿದೆ. ಹೃದಯ ಸಂಬಂಧಿ ಸಮಸ್ಯೆ, ಕ್ಯಾನ್ಸರ್, ಇಂಟರ್‌ವೆನ್ಷನಲ್ ರೇಡಿಯಾಲಜಿ, ಮಾನಸಿಕ ಆರೋಗ್ಯ ಸಮಸ್ಯೆ, ನರರೋಗ ಶಸ್ತ್ರಚಿಕಿತ್ಸೆ, ಕಣ್ಣಿನ ನರ ಚಿಕಿತ್ಸೆಯಂತಹ ಗಂಭೀರ ಸಮಸ್ಯೆಗಳ ಚಿಕಿತ್ಸೆ ದರವನ್ನು ಮಾರುಕಟ್ಟೆ ದರಕ್ಕೆ ತಕ್ಕಂತೆ ಹೆಚ್ಚಳಕ್ಕೆ ಶಿಫಾರಸ್ಸು ಮಾಡಲಾಗಿದೆ ಎಂದು ಡಾ.ಎನ್.ಟಿ. ಶ್ರೀನಿವಾಸ್ ಅವರು ತಿಳಿಸಿದರು.

ಮುಖ್ಯವಾಗಿ ಚಿಕಿತ್ಸಾ ದರ ಕಡಿಮೆಯಿದ್ದ ಕಾರಣ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಡಿ ಸೇವೆ ಒದಗಿಸಲು ನೋಂದಣಿ ಮಾಡಿಕೊಳ್ಳುತ್ತಿರಲಿಲ್ಲ. ದರ ಪರಿಷ್ಕರಣೆಯಾದರೆ ನೋಂದಣಿಗೆ ಉತ್ಸಾಹ ತೋರಲಿವೆ. ಇದರಿಂದ ದ್ವಿತೀಯ ಹಾಗೂ ತೃತೀಯ ಹಂತದ ನಗರಗಳಲ್ಲಿ ಸ್ಥಳೀಯವಾಗಿಯೇ ಸಾಕಷ್ಟು ಚಿಕಿತ್ಸೆ ಪಡೆಯಲು ಅನುಕೂಲವಾಗಲಿದ್ದು, ಪ್ರಾಣಾಪಾಯ ತಪ್ಪಿಸಲು, ರೋಗಿಗಳಿಗೆ ತಕ್ಷಣ ಚಿಕಿತ್ಸೆ ದೊರೆತು ಶೀಘ್ರ ಗುಣ ಮುಖರಾಗಲು ಅನುಕೂಲವಾಗಲಿದೆ ಎಂದು ಹೇಳಿದರು.

## ಸಹಕಾರ ಸಚಿವ ಕೆ.ಎನ್. ರಾಜಣ್ಣ ರವರ ಅಧ್ಯಕ್ಷತೆಯಲ್ಲಿ ಇಲಾಖಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ



**ಬೆಂಗಳೂರು :** ವಿಧಾನಸೌಧದ ಸಹಕಾರ ಸಚಿವರ ಕಚೇರಿಯಲ್ಲಿ ರಾಜ್ಯದ ಗೃಹ ನಿರ್ಮಾಣ ಸಹಕಾರ ಸಂಘಗಳ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡುವಲ್ಲಿ ಎದುರಾಗಿರುವ ಸಮಸ್ಯೆಗಳ ಬಗ್ಗೆ ಇಲಾಖಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯು ಸಹಕಾರ ಸಚಿವರಾದ ಕೆ.ಎನ್ ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಚಿವರು ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿದರು. ಸಕಾಲದಲ್ಲಿ ಗೃಹ ನಿರ್ಮಾಣ ಸಂಘಗಳು ಸದಸ್ಯರುಗಳಿಗೆ ನಿವೇಶನ ಹಂಚುವ ಬಗ್ಗೆ ಅಧಿಕಾರಿಗಳಿಗೆ ಉಪಯುಕ್ತ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಕೆ. ಮಣಿವಣ್ಣನ್, ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ ಕುಮಾರ್, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಜಿ.ಎಸ್. ರಮಣರೆಡ್ಡಿ, ಅಪರ ನಿಬಂಧಕರಾದ ಲಕ್ಷ್ಮೀಪತಯ್ಯ ಅವರು ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



# ಸಹಕಾರ ಕ್ಷೇತ್ರದ ಸಾಧಕ ಶ್ರೀ ಕೆ.ಎನ್. ರಾಜಣ್ಣರವರು



**ಲಕ್ಷ್ಮೀಪತಯ್ಯ,** ಕೆ.ಸಿ.ಎಸ್.
ಸಹಕಾರ ಸಂಘಗಳ ಅಪರ ನಿಬಂಧಕರು,
ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು.

ಕೆ.ಎನ್. ರಾಜಣ್ಣನವರು ದಿನಾಂಕ: 13.04.1951ರಲ್ಲಿ ನಂಜಪ್ಪ ಹಾಗೂ ತಾಯಿ ಲಕ್ಷ್ಮೀದೇವಮ್ಮನವರ ಮಗನಾಗಿ ತುಮಕೂರು ಜಿಲ್ಲೆಯ ಕ್ಯಾತಸಂದ್ರದಲ್ಲಿ ಜನಿಸಿದರು. ಬಿ.ಎಸ್ಸಿ, ಎಲ್.ಎಲ್.ಬಿ. ಪದವಿಧರರಾದ ಇವರು ವೃತ್ತಿಯಲ್ಲಿ ವಕೀಲರು. ರೈತರ ಪರ ಸರ್ವಾಂಗೀಣ ಏಳಿಗೆಗಾಗಿ ಹಗಲಿರುಳು ತಮ್ಮ ಜೀವನವನ್ನು ಮುಡುಪಾಗಿಟ್ಟಿರುತ್ತಾರೆ. ರೈತರ ಹಿತದೃಷ್ಟಿಯಿಂದ ಸರ್ಕಾರದ ಅನೇಕ ವಿವಿಧ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಇವರ ಕೊಡುಗೆ ಅಪಾರವಾದದ್ದು. ಸಹಕಾರಿ ಮುಖಂಡರಾಗಿ, ಜನನಾಯಕರಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುತ್ತಾರೆ. ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಿಂದ ಬಂದ ಇವರು ರೈತಾಪಿ ಜನರ ಸಮಸ್ಯೆಗಳನ್ನು ಹತ್ತಿರದಿಂದ ಬಲ್ಲವರಾಗಿದ್ದಾರೆ. ನಾಯಕತ್ವದ ಗುಣವನ್ನು ವಿದ್ಯಾರ್ಥಿ ಜೀವನದಲ್ಲಿಯೇ ರೂಪಿಸಿಕೊಂಡು ರಾಜಕೀಯ ಪ್ರವೇಶವನ್ನು ಮಾಡಿದರು. ತದನಂತರದಲ್ಲಿ 1969ರಲ್ಲಿ ಕಾಂಗ್ರೆಸ್ ಕಾರ್ಯಕರ್ತರಾಗಿ ಸೇವೆಯನ್ನು ಸಲ್ಲಿಸುವುದರ ಮೂಲಕ ಜನನಾಯಕರಾಗಿ ಗುರುತಿಸಿಕೊಂಡರು.

ಕೆ.ಎನ್. ರಾಜಣ್ಣನವರು 1970ರಿಂದ ತುಮಕೂರು ತಾಲ್ಲೂಕು ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿ, 1980–1984ವರೆಗೆ ತುಮಕೂರು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆಸಲ್ಲಿಸಿದರು ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದ್ದಾರೆ. 1998–2004ರವರೆಗೆ ತುಮಕೂರು ಜಿಲ್ಲೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯರಾಗಿ ಸೇವೆ. ಬೆಳ್ಳಾವಿ ವಿಧಾನ ಸಭಾ ಕ್ಷೇತ್ರದಿಂದ ಶಾಸಕರಾಗಿ 2004 ರಿಂದ 2008ರ ವರೆಗೆ ಸೇವೆ, 2013 ರಿಂದ 2018 ರವರೆಗೆ ಹಾಗೂ 2023 ರಿಂದ ಮಧುಗಿರಿ ವಿಧಾನ ಸಭಾ ಕ್ಷೇತ್ರದ ಶಾಸಕರಾಗಿ ಸೇವೆ. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಬೆಂಗಳೂರು ಇಲ್ಲಿ ಅಧ್ಯಕ್ಷರಾಗಿ 2001 ರಿಂದ 2005 ರವರೆಗೆ ಸೇವೆ ಸಲ್ಲಿಸಿ ಪುನಃ 2015 ರಂದು 2ನೇ ಬಾರಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಉತ್ತಮ ಮಾರ್ಗದರ್ಶನ ಮಾಡಿದರು. 1976 ರಲ್ಲಿ ಕ್ಯಾತ್ಸಂದ್ರ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಿರ್ದೇಶಕರಾಗಿ ಸೇವೆ. 1979ರಲ್ಲಿ ಕ್ಯಾತ್ಸಂದ್ರ ಟೌನ್ ಪಂಚಾಯತ್ ಅಧ್ಯಕ್ಷರಾಗಿ ಸೇವೆ. ಹೀಗೆ ಸಹಕಾರ ಕ್ಷೇತ್ರದ ಜೊತೆ ಜೊತೆಯಲ್ಲಿ ಅವರು ರಾಜಕೀಯ ಕ್ಷೇತ್ರದಲ್ಲಿಯೂ ಜನಪ್ರಿಯ ಜನನಾಯಕರಾಗಿ ಬೆಳೆದರು.

### ಕೆ.ಎನ್. ರಾಜಣ್ಣರವರ ರಾಷ್ಟ್ರೀಯ ಮಟ್ಟದ ಸಹಕಾರ ಸಂಸ್ಥೆಗಳಲ್ಲಿ ಸೇವೆ

* ಕೋ–ಆಪ್ ಬ್ಯಾಂಕ್ ಆಫ್ ಇಂಡಿಯಾ, ನವದೆಹಲಿಯ ನಿರ್ದೇಶಕರಾಗಿ ಸೇವೆ.
* ನಾಫೆಡ್ ನವದೆಹಲಿ, ನಿರ್ದೇಶಕರಾಗಿ ಸೇವೆ.
* ನ್ಯಾಫ್‌ಕಬ್ ಮುಂಬೈ ಇಲ್ಲಿ ಉಪಾಧ್ಯಕ್ಷರಾಗಿ ಸೇವೆ.
* ಪ್ರಪಂಚದಾದ್ಯಂತ ಪ್ರವಾಸ ಮಾಡಿ ಅಂತರರಾಷ್ಟ್ರೀಯ ಸಹಕಾರಿ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧವನ್ನು ಮಂಡಿಸಿದ್ದಾರೆ.




## ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳು

* ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಸೇವೆ.

* ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ನಿ.)ಇಲ್ಲಿ ನಿರ್ದೇಶಕರಾಗಿ ಸೇವೆ.

* ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಬೆಂಗಳೂರು ನಿರ್ದೇಶಕರಾಗಿ ಸೇವೆ.

* ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೆನೆಟ್ ಸದಸ್ಯರಾಗಿ ಸೇವೆ.

ಜಿಲ್ಲಾ ಮಟ್ಟದಲ್ಲಿ = ಟಿ.ಎ.ಪಿ.ಸಿ.ಎಂ.ಎಸ್. ಅಧ್ಯಕ್ಷರಾಗಿ 10 ವರ್ಷಗಳ ನಿರಂತರ ಸೇವೆ. (1979 ರಿಂದ 1989ರವರೆಗೆ)

* ಡಿಸಿಸಿ ಬ್ಯಾಂಕ್‌ಗೆ 5 ಬಾರಿ ನಿರ್ದೇಶಕರಾಗಿ ಸೇವೆ.

* ತುಮಕೂರು ಎ.ಪಿ.ಎಂ.ಸಿ.ಯಲ್ಲಿ 2 ಬಾರಿ ನಿರ್ದೇಶಕರಾಗಿ ಸೇವೆ.

* ತುಮಕೂರು ತಾಲ್ಲೂಕು ಭೂ ನ್ಯಾಯಮಂಡಳಿ ಸದಸ್ಯರಾಗಿ 1980ರ ವರೆಗೆ ಸೇವೆ.

* ತುಮಕೂರು ಜಿಲ್ಲಾ ಸಹಕಾರ ಯೂನಿಯನ್ ನಿ., ಇದರ ನಿರ್ದೇಶಕರಾಗಿ ಸೇವೆ.

ಕೆ.ಎನ್. ರಾಜಣ್ಣನವರು ಸಾಮಾಜಿಕ ಹಾಗೂ ಸಹಕಾರ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬೆಳೆದವರು ಇವರು ಪ್ರಾಮಾಣಿಕತೆ ನಿಷ್ಠೆ ಸೇವಾ ಮನೋಭಾವ ಹಾಗೂ ತಾತ್ವಿಕ ವಿಚಾರಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ನಿಷ್ಠರಾಗಿ ನಾಡಿನ ಶ್ರೇಷ್ಠ ಸಹಕಾರಿಗಳಾಗಿ ಸಹಕಾರ ಕ್ಷೇತ್ರದಲ್ಲಿ ಜನಮಾನಸದಲ್ಲಿ ಬೇರೂರಿ ಜನರ ಜೊತೆ ಬೆಳೆದರು. ರಾಜಕೀಯ ಕ್ಷೇತ್ರದಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಹಾಗೂ ಕರ್ನಾಟಕ ವಿಧಾನ ಸಭೆಯ ಸದಸ್ಯರಾಗಿ ತಮ್ಮ ಹುದ್ದೆಗೆ ಗೌರವ ತರುವಂತಹ ಹಾಗೂ ವೈವಿಧ್ಯಮಯ ಪ್ರಗತಿ ಕಾರ್ಯಗಳನ್ನು ತಮ್ಮ ಅಧಿಕಾರಾವಧಿಯಲ್ಲಿ ಕ್ಷೇತ್ರದಲ್ಲಿ ಕೈಗೊಂಡು ಆದರ್ಶ ರಾಜಕಾರಣಿಯಾಗಿ ಯುವಜನರಿಗೆ ಪ್ರೇರಣೆಯಾಗಿದ್ದಾರೆ.

ಅಪಾರ ಅನುಭವ ಮತ್ತು ಪರಿಶ್ರಮದಿಂದ ಸಹಕಾರಿ ತತ್ವ ಆದರ್ಶಗಳಲ್ಲಿ ಅಪಾರ ನಂಬಿಕೆಯಿಂದ ಇವರು ಸಹಕಾರ ಕ್ಷೇತ್ರವನ್ನು ತಮ್ಮ ಅಮೂಲ್ಯ ಸೇವೆಯ ಮೂಲಕ ಶ್ರೀಮಂತಗೊಳಿಸಿದ್ದಾರೆ. ಅವರ ಮಾತಿನಲ್ಲೇ ಹೇಳಬೇಕಾದರೆ "ನಾನು ಜೀವನದಲ್ಲಿ ಬಡತನ ಸಿರಿತನವನ್ನು ನೋಡಿದ್ದೇನೆ ಅಧಿಕಾರವನ್ನು ಅನುಭವಿಸಿದ್ದೇನೆ. ಆದರೆ, ಅವೆಲ್ಲವೂ ಶಾಶ್ವತವಲ್ಲ ರೈತರು ಬಡಜನತೆ ಆರ್ಥಿಕವಾಗಿ ಅಬಲರಾದವರ ಶೋಷಣೆಯನ್ನು ತಪ್ಪಿಸುವುದೇ ತನ್ನ ಜೀವನದ ಗುರಿ". ಎಂಬುದು ಅವರ ನುಡಿಯಾಗಿದೆ.

## ಕೊಡುಗೆ

ರಾಜ್ಯದ ಸಹಕಾರಿ ಕ್ಷೇತ್ರದ ಪ್ರಮುಖ ಸಂಸ್ಥೆಯಾದ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ತಮ್ಮ ಹೆಚ್ಚಿನ ಅನುಭವದ ದಿಟ್ಟ ನಿರ್ಧಾರಗಳಿಂದ ಅಪೆಕ್ಸ್ ಬ್ಯಾಂಕ್‌ನ್ನು ರೈತರ ಸಮುದಾಯದ ಹಿತದೃಷ್ಟಿಯಿಂದಲೂ ಕಾರ್ಯತತ್ಪರತೆಯಿಂದಲೂ ಶ್ರಮಿಸಿದ್ದಾರೆ. ಈ ಬ್ಯಾಂಕಿನ ಕಾರ್ಯಚಟುವಟಿಕೆಯಲ್ಲಿ ಅನೇಕ ಮಾರ್ಪಾಡು ಮಾಡುವುದರ ಮೂಲಕ ಮತ್ತೆ ಕಾರ್ಯರೂಪಕ್ಕೆ ತರುವುದರ ಮೂಲಕ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಹಕಾರ ಕ್ಷೇತ್ರವನ್ನು ಮಾದರಿಯನ್ನಾಗಿ ಮಾಡುವಲ್ಲಿ ರಾಜಣ್ಣನವರ ಪಾತ್ರ ದೊಡ್ಡದು. ತುಮಕೂರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ ಬ್ಯಾಂಕಿನಲ್ಲಿ ಕೃಷಿ ಮತ್ತು ಕೃಷಿಯೇತರ ಸಾಲಗಳ ನೀಡಿಕೆ, ಸಾಲ ವಸೂಲಾತಿ ಕಾರ್ಯದಕ್ಷೆ, ಆಡಳಿತ ಸುಧಾರಣೆ ತರಬೇತಿ, ಶಿಕ್ಷಣ ಮುಂತಾದ ವಿಷಯಗಳಲ್ಲಿ ಪ್ರಗತಿದಾಯಕ ಮಾರ್ಪಾಡುಗಳಿಂದ ಬ್ಯಾಂಕಿಗೆ ಒಂದು ಹೊಸ ರೂಪವನ್ನು ತಂದು ಕೊಟ್ಟರು. ಇಂದು ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಒಂದು ಆದರ್ಶ ಮತ್ತು ಅನುಕರಣೀಯ ಡಿಸಿಸಿ ಬ್ಯಾಂಕಾಗಿ ರಾಜ್ಯದಲ್ಲೆ ಮಾದರಿ ಸಹಕಾರ

ಬ್ಯಾಂಕ್‌ಗಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರ ಕ್ಷೇತ್ರದಲ್ಲಿ ಶಿಕ್ಷಣ ತರಬೇತಿ ಮತ್ತು ಪ್ರಚಾರದ ಬಗ್ಗೆ ವಿಶೇಷಷ ಕಾಳಜಿ ಹೊಂದಿರುವ ಇವರು ತುಮಕೂರು ಜಿಲ್ಲಾ ಸಹಕಾರಿ ಯೂನಿಯನ್ನಿಗೆ ಈ ಹಿಂದೆ ಸುಮಾರು ಒಂದು ಎಕರೆ ವಿಸ್ತೀರ್ಣವುಳ್ಳ ನಿವೇಶನವನ್ನು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದೊರಕಿಸಿಕೊಡುವಲ್ಲಿ ಮತ್ತು ಸುಸಜ್ಜಿತವಾದ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ರಾಜಣ್ಣನವರ ಕೊಡುಗೆ ಹಾಗೂ ಸೇವೆ ಸುವರ್ಣಾಕ್ಷರಗಳಲ್ಲಿ ಬರೆಯುವಂತಹದು.

### ಮಹಿಳಾ ಸಬಲೀಕರಣ

ಕೆ.ಎನ್.ಆರ್. ಸೌಹಾರ್ದ ಪತ್ತಿನ ಸಹಕಾರಿ ನಿ., ಮಧುಗಿರಿ ಕೆ.ಎನ್. ಆರ್. ಮಹಿಳಾ ಪತ್ತಿನ ಸಹಕಾರ ಸಂಘ ನಿ., ತುಮಕೂರು ಇವುಗಳ ಗೌರವಾಧ್ಯಕ್ಷರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ತುಮಕೂರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ ಗ್ರಾಮೀಣ ಬಡ ಮಹಿಳೆಯರ ಹಿತದೃಷ್ಟಿಯಿಂದ ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಕಾಮಧೇನು ಕ್ರೆಡಿಟ್ ಕಾರ್ಡ್ ಯೋಜನೆಯನ್ನು 31.03.2002 ರಿಂದ ಸ್ವ–ಸಹಾಯ ಗುಂಪುಗಳಿಗೆ ಪರಿಚಯಿಸಿ ಜಿಲ್ಲೆಯ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೂ ಮುನ್ನುಡಿ ಬರೆದರು.

### ಸಾಮಾಜಿಕ ಕಳಕಳಿ

ತುಮಕೂರು ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಬರಗಾಲದ ದವಡೆಗೆ ಸಿಲುಕಿದ್ದ ಜಾನುವಾರುಗಳಿಗೆ ಮೇವು ಒದಗಿಸಲು ಕರ್ನಾಟಕ ಸರ್ಕಾರ ತೆರೆದಿದ್ದ ಒಟ್ಟು 40 ಗೋಶಾಲೆಗಳಿಗೆ ಬರುವ ರೈತರು ಅದರಲ್ಲೂ ರೈತ ಹೆಣ್ಣುಮಕ್ಕಳು ಹಾಗೂ ಅವರ ಮಕ್ಕಳಿಗೆ ಬ್ಯಾಂಕಿನ ವತಿಯಿಂದ ಉಚಿತವಾಗಿ ಕುಡಿಯುವ ನೀರಿನ ವ್ಯವಸ್ಥೆ ಮತ್ತೆ ಬಿಸಿ ಉಟೋಪಚಾರದ ವ್ಯವಸ್ಥೆಯನ್ನು ಕೈಗೊಂಡು ರೈತರ ಸಂಕಷ್ಟಗಳಿಗೆ ಸ್ಪಂದಿಸಿ ಇಡೀ ರಾಜ್ಯಕ್ಕೆ ಮಾದರಿಯಾಗಿದ್ದಾರೆ. ಜಿಲ್ಲೆಯ ರೈತರ ಮಕ್ಕಳಿಗೆ ಪ್ರತಿವರ್ಷ ಪ್ರತಿಭಾ ಪುರಸ್ಕಾರವನ್ನು ನೀಡುವ ಮಾದರಿ ಯೋಜನೆಯನ್ನು ಜಾರಿಗೊಳಿಸಿ ಗ್ರಾಮೀಣ ಪ್ರದೇಶದ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಿರುತ್ತಾರೆ.

### ಪ್ರಶಸ್ತಿ ಪುರಸ್ಕಾರಗಳು

ಕೆ.ಎನ್. ರಾಜಣ್ಣನವರು ಸಹಕಾರಿಯಾಗಿ ಸಹಕಾರ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸುಮಾರು ನಾಲ್ಕು ದಶಕಗಳ ಅವಿರತ ಸೇವೆ ಗುರುತಿಸಿ ದಿನಾಂಕ:14.11.2013 ರಂದು ಜರುಗಿದ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದಿಂದ "ಸಹಕಾರ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ. 2011–12ನೇ ಸಾಲಿನಲ್ಲಿ ತುಮಕೂರು ಡಿಸಿಸಿ ಬ್ಯಾಂಕ್‌ನ ಅತ್ಯುತ್ತಮ ಸಾಧನೆಗಾಗಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನೀಡುವ ಪ್ರಥಮ ಬಹುಮಾನವನ್ನು ಗಳಿಸಿರುವುದು ಅಧ್ಯಕ್ಷರಾದ ಕೆ.ಎನ್. ರಾಜಣ್ಣನವರ ದೂರದರ್ಶಿತ್ವ ಮತ್ತು ಪರಿಶ್ರಮಕ್ಕೆ ಸಂದ ಗೌರವವಾಗಿದೆ.

ಏಷ್ಯಾದಲ್ಲಿಯೇ ಪ್ರಥಮ ಸಹಕಾರ ಸಂಘವಾದ ಕಣಗಿನಹಾಳ



ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಭೇಟಿ ನೀಡಿ ಸಂಘದ ಪುನಃಶ್ಚೇತನ ಕಾರ್ಯಕ್ಕೆ ಅಪೆಕ್ಸ್ ಬ್ಯಾಂಕಿನಿಂದ ರೂ.1.00 (ಒಂದು ಕೋಟಿ) ಆರ್ಥಿಕ ನೆರವನ್ನು ನೀಡಿರುವುದು ಅವರಿಗೆ ಸಹಕಾರಿ ಚಳುವಳಿಯ ಮೇಲಿರುವ ಅಭಿಮಾನ ಮತ್ತು ರೈತ ಸಮುದಾಯದ ಮೇಲೆ ಇರುವ ಕಾಳಜಿಯನ್ನು ಎತ್ತಿ ತೋರಿಸುತ್ತದೆ. ರಾಜಣ್ಣನವರು ರೈತರ ಪರವಾಗಿ ರೈತರ ಏಳಿಗೆಗೆ ರೈತರಿಗೊಸ್ಕರ ತಮ್ಮ ಬದುಕನ್ನು ಮುಡಿಪಾಗಿಟ್ಟವರು. ಪ್ರಸ್ತುತ ರಾಜ್ಯದ ಸಹಕಾರ ಸಚಿವರಾಗಿ ಅವರು ರೂಪಿಸುತ್ತಿರುವ ಕಾರ್ಯಯೋಜನೆಗಳು ರೈತರ, ಜನಸಾಮಾನ್ಯರ ಬದುಕಿಗೆ ಉತ್ತಮ ದಾರಿದೀಪವಾಗುತ್ತದೆ ಎಂಬ ಆಶಯವಿದೆ.

ಹೀಗೆ, ಗ್ರಾಮಾಂತರ ರೈತರನ್ನು ಮಧ್ಯವರ್ತಿಗಳ ಶೋಷಣೆಯಿಂದ ಮುಕ್ತಗೊಳಿಸಲು ಅನೇಕ ಪ್ರಗತಿಪರ ಯೋಜನೆಯನ್ನು ಅನುಷ್ಠಾನ ಗೊಳಿಸುತ್ತಾ ಬಂದಿದ್ದಾರೆ. ರೈತರ ಏಳಿಗೆಗಾಗಿ ಮಹಿಳಾ ಸಬಲೀಕರಣಕ್ಕಾಗಿ ಉತ್ತಮ ಆಡಳಿತಕ್ಕಾಗಿ ಸರ್ವಜನಾಂಗದ ಅಭಿವೃದ್ಧಿಗಾಗಿ "ಸಹಕಾರ" ಕ್ಷೇತ್ರದ ಮೂಲಕ ತಮ್ಮನ್ನು ಅರ್ಪಿಸಿಕೊಂಡರು. ಹೀಗೆ, ರಾಷ್ಟ್ರದ ಹಾಗೂ ರಾಜ್ಯದ ಸಹಕಾರಿ ಚಳುವಳಿಗೆ ತುಮಕೂರು ಜಿಲ್ಲೆ ನೀಡಿದ ಅತ್ಯುತ್ತಮ ಸಹಕಾರಿ ಧುರೀಣ ಕೆ.ಎನ್. ರಾಜಣ್ಣನವರು.

ಹಿರಿಯ ಸಹಕಾರಿ ಹಾಗೂ ಸಹಕಾರಿ ಕ್ಷೇತ್ರದ ದೀಮಂತ ನಾಯಕ ಹಾಗೂ ವೈಶಿಷ್ಟ ಪೂರ್ಣವಾದ ವ್ಯಕ್ತಿತ್ವ ಹಾಗೂ ಅರ್ಪಣ ಮನೋಭಾವದಿಂದ ರಾಷ್ಟ್ರೀಯ ಸಹಕಾರ ಕ್ಷೇತ್ರದಲ್ಲಿ ಖ್ಯಾತಿ ಹೊಂದಿರುವ ಮುತ್ಸದಿ ಹೆಮ್ಮೆಯ ಪುತ್ರ ಕೆ.ಎನ್. ರಾಜಣ್ಣನವರು ಮಾನ್ಯ ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯನವರ ಸಂಪುಟದಲ್ಲಿ ಸಹಕಾರ ಸಚಿವರಾಗಿ ಕರ್ನಾಟಕದ ಸಹಕಾರಿಗಳಿಗೆ ಹೆಮ್ಮೆಪಡುವ ರೀತಿಯಲ್ಲಿ ಸಾಕಷ್ಟು ಜನಪ್ರಿಯ ಕಾರ್ಯಕ್ರಮಗಳನ್ನು ಸಹಕಾರ ಕ್ಷೇತ್ರಕ್ಕೆ ನೀಡುತ್ತಿದ್ದಾರೆ. ಅವುಗಳ ಪ್ರಮುಖ ಸಾಧನೆಗಳು ಈ ರೀತಿ ಇವೆ.....

# ಕೆ.ಎನ್. ರಾಜಣ್ಣರವರು ಸಹಕಾರ ಸಚಿವರಾದ ಮೇಲೆ ಸಹಕಾರ ಕ್ಷೇತ್ರದಲ್ಲಿ ಸಾಧಿಸಿದ ಸಾಧನೆಗಳ ಕಿರು ಪರಿಚಯ

**1. ಸಹಕಾರ ಇಲಾಖೆಯಿಂದ ಕೈತಪ್ಪಿದ್ದ ಲೆಕ್ಕಪರಿಶೋಧನಾ ಇಲಾಖೆಯನ್ನು ಮರುಸೇರ್ಪಡೆಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುವಿಕೆ.**

ಈ ಹಿಂದೆ ಸಹಕಾರ ಇಲಾಖೆಯೊಂದಿಗೆ ಇದ್ದ ಲೆಕ್ಕಪರಿಶೋಧನಾ ಇಲಾಖೆಯ ಅನ್ಯ ಇಲಾಖೆಯೊಂದಿಗೆ ಸಂಯೋಜಿಸಲು ಅವಶ್ಯಕತೆಯನ್ನು ಮನಗಂಡ ಸಚಿವರು ಇದನ್ನು ಮರಳಿ ಸಹಕಾರ ಇಲಾಖೆಯಲ್ಲಿಯೇ ಉಳಿದುಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾದರು.

**2. ಯಶಸ್ವಿನಿ ಯೋಜನೆಗೆ ಪ್ರೋತ್ಸಾಹ.**

ಬಹುಬೇಡಿಕೆಯ ಮತ್ತು ಜನಪ್ರಿಯ ಆರೋಗ್ಯ ರಕ್ಷಣಾ ಯೋಜನೆಗಳಲ್ಲಿ ಒಂದಾದ ಯಶಸ್ವಿನಿ ಯೋಜನೆಯನ್ನು ಮರುಜಾರಿಗೊಳಿಸಿದ ನಂತರ ಅದಕ್ಕೆ ಸೂಕ್ತ ರೀತಿಯ ಎಲ್ಲ ಪ್ರೋತ್ಸಾಹ ಮತ್ತು ಅನುಕೂಲಗಳನ್ನು ಮಾಡಿದ ಕೀರ್ತಿ

**3. ಕಾಸ್ಕಾರ್ಡ್ ಬ್ಯಾಂಕ್‌ಗೆ ಕಾಯಕಲ್ಪ ನೀಡುವಲ್ಲಿ ಪ್ರಮುಖ ರೂವಾರಿ.**

ಶತಮಾನದ ಇತಿಹಾಸವಿರುವ ಕಾಸ್ಕಾರ್ಡ್ ಬ್ಯಾಂಕ್ ನಷ್ಟದಲ್ಲಿದ್ದು, ಕಾಸ್ಕಾರ್ಡ್ ಮತ್ತು ಪಿಕಾರ್ಡ್ ಬ್ಯಾಂಕುಗಳನ್ನು ಉಳಿಸುವ ಹಾಗೂ ಬೆಳೆಸುವ ದೃಷ್ಟಿಯಿಂದ ಕಾಯಕಲ್ಪ ನೀಡಿದ ಸಾಧಕರು

**4. ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಏಕ ಮಾದರಿಯ ತಂತ್ರಾಂಶ ಒದಗಿಸಲು ಪ್ರಯತ್ನ.**

ರಾಜ್ಯದ ಎಲ್ಲ ಸಹಕಾರ ಸಂಘಗಳು ಏಕಮಾದರಿಯ ತಂತ್ರಾಂಶವನ್ನು ಹೊಂದಿದ್ದಲ್ಲಿ ನಿಖರತೆ, ಪಾರದರ್ಶಕತೆಯನ್ನು ಕಾಪಾಡಬಹುದೆಂಬ ದೃಷ್ಟಿಯಿಂದ ಎಲ್ಲ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಏಕ ಮಾದರಿಯ ತಂತ್ರಾಂಶವನ್ನು ಒದಗಿಸಲು ಪ್ರಾರಂಭ ಮಾಡಿರುತ್ತಾರೆ.

**5. ಜಿಲ್ಲಾಮಟ್ಟ, ವಿಭಾಗಮಟ್ಟ ಹಾಗೂ ರಾಜ್ಯಮಟ್ಟಗಳಲ್ಲಿ ಸಹಕಾರ ಇಲಾಖಾಧಿಕಾರಿಗಳ ಪ್ರಗತಿ ಪರಿಶೀಲನೆ.**

ಸಹಕಾರ ಇಲಾಖಾಧಿಕಾರಿಗಳ ಕಾರ್ಯವೈಖರಿಯನ್ನೊಳಗೊಂಡಂತೆ ಇತರೆ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸಾಧ್ಯವಾಗುವಂತೆ ಪ್ರಗತಿ ಪರಿಶೀಲನೆಯನ್ನು ಜಿಲ್ಲಾಮಟ್ಟದಲ್ಲಿ, ವಿಭಾಗಮಟ್ಟದಲ್ಲಿ ಮತ್ತು ರಾಜ್ಯಮಟ್ಟಗಳಲ್ಲಿ ಇಲಾಖಾಧಿಕಾರಿಗಳಿಗೆ ಜರುಗಿಸುತ್ತಿರುವುದು ಸಹ ಸಾಧನೆಗೆ ಹಿಡಿದ ಕನ್ನಡಿಯಾಗಿದೆ.

**6. ಮಧುಗಿರಿಯಲ್ಲಿ ಕ್ಷೀರಭಾಗ್ಯ ಯೋಜನೆ ಸಮಾರಂಭ.**

ರಾಜ್ಯ ಸರ್ಕಾರದ ಕ್ಷೀರಭಾಗ್ಯ ಯೋಜನೆಯ ದಶಮಾನೋತ್ಸವ ಸಮಾರಂಭವನ್ನು ಅದ್ದೂರಿಯಾಗಿ ಆಚರಿಸಿ, ಕೆಎಂಎಫ್ ಯೋಜನೆಗಳನ್ನು ವಿಸ್ತರಿಸಿ, ಜಾರಿಗೆ ತಂದ ಯಶಸ್ಸು.

**7. ನಂದಿನಿ ಉತ್ಪನ್ನಗಳನ್ನು ವಿದೇಶಗಳಲ್ಲಿ ಮಾರಲು ಕ್ರಮ.**

ಕರ್ನಾಟಕದ ಅತ್ಯುತ್ತಮ ಹಾಲು ಉತ್ಪನ್ನಗಳ ಬ್ರಾಂಡ್ ಆಗಿರುವ "ನಂದಿನಿ" ಉತ್ಪನ್ನಗಳು ರಾಜ್ಯದಲ್ಲಿ ಹಾಗೂ ಕೆಲವೇ ಅಂತರಾಜ್ಯಗಳಲ್ಲಿ ಮಾರಾಟವಾಗುತ್ತಿದ್ದು, ಇದನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಮಾಡುವ ನಿಟ್ಟಿನಲ್ಲಿ ವಿದೇಶಗಳಲ್ಲಿ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಲು ಕ್ರಮವಿಟ್ಟ ಕೀರ್ತಿ ಇವರದ್ದಾಗಿದೆ. ಅಲ್ಲದೆ ಅಂತರಾಷ್ಟ್ರೀಯ ಕ್ರೀಡೆಗಳಲ್ಲಿಯೂ ಸಹ ಜಾಹಿರಾತು ಪ್ರಕಟಣೆಗೆ ಕಾರಣಕರ್ತರಾಗಿದ್ದಾರೆ.

**8. ಸಹಕಾರ ಕಾಯ್ದೆ ತಿದ್ದುಪಡಿಗೆ ಸಮಿತಿ ರಚನೆ ಹಾಗೂ ತಿದ್ದುಪಡಿ ವಿಧೇಯಕ ಮಂಡನೆ.**

ಬಹುವರ್ಷಗಳಿಂದ ಅಗತ್ಯಕ್ಕೆ ತಕ್ಕಂತೆ ತಿದ್ದುಪಡಿಗೊಳ್ಳದೆ ಉಳಿದಿದ್ದ ಸಂಘಗಳ ಕಾಯಿದೆಯಲ್ಲಿ ಸೂಕ್ತ ತಿದ್ದುಪಡಿಯನ್ನು ಕೈಗೊಳ್ಳಲು ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಿ ಕ್ರಮವಿಟ್ಟ ಕೀರ್ತಿ ಸಲ್ಲುತ್ತದೆ.

9. ಸಹಕಾರ ಸಂಘಗಳ ನಿಬಂಧಕರ ಕಚೇರಿಯ ನೂತನ ಕಟ್ಟಡ ನಿರ್ಮಾಣ ಅಂದಾಜು 10 ಕೋಟಿ ರೂ. ವೆಚ್ಚದಲ್ಲಿ ಚಾಲನೆ.

ಬಹಳ ವರ್ಷಗಳಿಂದ ಒಂದೇ ಕಟ್ಟಡದಲ್ಲಿ ಸ್ಥಳಾವಕಾಶದ ಕೊರತೆಯಿಂದ ಕಾರ್ಯನಿರ್ವಹಿಸುತ್ತಿದ್ದ ನಿಬಂಧಕರ ಕಚೇರಿಗೆ ಒಂದು ಹೊಸ ನೂತನ ಕಟ್ಟಡವನ್ನು ಅಂದಾಜು 10 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಚಾಲನೆ ನೀಡಿದರು.

**10. ಸಹಕಾರ ಸಂಘಗಳ ಉಪನಿಬಂಧಕರಿಗೆ ವಾಹನ ಸೌಲಭ್ಯ**

ಸಹಕಾರ ಸಂಘಗಳ ಉಪ ನಿಬಂಧಕರಿಗೆ ವಾಹನ ಸೌಲಭ್ಯ ಇಲ್ಲದಿರುವುದನ್ನು ಮನಗಂಡು ಕಾರ್ಯಕ್ಷಮತೆಯನ್ನು ಹೆಚ್ಚಿಸಿ, ಪ್ರೋತ್ಸಾಹಿಸುವ ಸಲುವಾಗಿ 32 ಬೊಲೆರೋ ಜೀಪುಗಳನ್ನು ಜೆಮ್ ಪೋರ್ಟಲ್ ಮೂಲಕ ಖರೀದಿಸಿ ಸಹಕಾರ ಸಂಘಗಳ ಉಪನಿಬಂಧಕರುಗಳಿಗೆ ಒದಗಿಸಿದ ಸಾಧನೆ ಸಚಿವರದ್ದಾಗಿದೆ.

ಹೀಗೆ ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಜನಪ್ರಿಯ ಕಾರ್ಯಕ್ರಮಗಳನ್ನು ನೀಡಿರುವ ಕೆ.ಎನ್.ರಾಜಣ್ಣ ನವರು ದಿನಾಂಕ: 13–04–2025 ಕ್ಕೆ 74ನೇ ವಸಂತಗಳನ್ನು ಪೂರೈಸಿ ತಮ್ಮ 75ನೇ ಹುಟ್ಟು ಹಬ್ಬವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಮತ್ತಷ್ಟು ಸಾಧನೆಗಳನ್ನು ಹಾಗೂ ಕೊಡುಗೆಗಳನ್ನು ಸಹಕಾರ ಕ್ಷೇತ್ರಕ್ಕೆ ನೀಡಬೇಕೆಂಬುದೇ ಪ್ರತಿಯೊಬ್ಬ ಸಹಕಾರಿಗಳ ಆಶಯವಾಗಿದೆ.

# ಅಂತಾರಾಷ್ಟ್ರೀಯ ಸಹಕಾರಿ ವರ್ಷ– 2025

## ಆಚರಣೆಯ ಧ್ಯೇಯ: "ಸಹಕಾರ ಸಂಸ್ಥೆಗಳು ಉತ್ತಮ ಜಗತ್ತನ್ನು ನಿರ್ಮಿಸಬಲ್ಲವು"

ಸಹಕಾರ ಚಳವಳಿ ನಿಂತ ನೀರಲ್ಲ.. ಸದಾ ಹರಿವ ನೀರಿನಂತೆ ಚಳವಳಿ ಶುದ್ಧ, ಸ್ವಚ್ಛ ಹಾಗೂ ಕ್ರಿಯಾಶೀಲವಾಗಿದೆ. ಹಲವು ದಶಕಗಳ ಹಿಂದೆ ರೈತರ, ಗ್ರಾಹಕರ ಚಳವಳಿಯಾಗಿ ಹುಟ್ಟಿಕೊಂಡ ವ್ಯವಸ್ಥೆ ದಿನಗಳು ಉರುಳಿದಂತೆ ಜೀವನದ ಎಲ್ಲಾ ಆಯಾಮಗಳನ್ನು ಆವರಿಸಿಕೊಂಡು ಬದುಕಿನ ಅವಿಭಾಜ್ಯ ಅಂಗವಾಗಿಯೇ ಗುರುತಿಸಿಕೊಂಡಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದ ಹಿಡಿದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳವರೆಗೆ ಸಹಕಾರ ತತ್ವ ಆದರ್ಶಗಳನ್ನು ಜನರು ಬೆಂಬಲಿಸುತ್ತಿದ್ದಾರೆ. ಜಾಗತಿಕ ಉದ್ದಿಮೆಗಳು ಸಹ ಇಂದು ಸಹಕಾರ ತತ್ವದಲ್ಲಿ ನಂಬಿಕೆ ಇರಿಸಿ ಮಾತನಾಡುತ್ತಿರುವುದನ್ನು ನೋಡಬಹುದು, ಕೇಳಬಹುದು.

ಸಹಕಾರ ಚಳವಳಿಯ ಸಾಧನೆಯನ್ನು ಮಹತ್ವವನ್ನು ಅರಿತ ಅಂತಾರಾಷ್ಟ್ರೀಯ ಸಹಕಾರ ಒಕ್ಕೂಟವು ಚಳವಳಿಯ ಸಾಧಕ – ಬಾಧಕಗಳ ಕುರಿತು ಚಿಂತಿಸುವ ಒಂದು ವೇದಿಕೆಯನ್ನು ಹುಟ್ಟುಹಾಕಿತು. ಅದುವೇ ಅಂತಾರಾಷ್ಟ್ರೀಯ ಸಹಕಾರ ದಿನ. ಇದರ ಹಿನ್ನಲೆಯಲ್ಲಿ ಪ್ರತಿ ವರ್ಷ ಜುಲೈ ತಿಂಗಳ ಮೊದಲ ಶನಿವಾರದಂದು ಅಂತಾರಾಷ್ಟ್ರೀಯ ಸಹಕಾರ ದಿನವನ್ನು ವಿಶ್ವದಾದ್ಯಂತ ಆಚರಿಸುವ ಮೂಲಕ ಜನಜಾಗೃತಿ ಉಂಟುಮಾಡಲು ಪ್ರಯತ್ನಗಳು ನಡೆದವು. ಇದನ್ನು ಮೀರಿದ ಪ್ರಯತ್ನವೇ ಅಂತಾರಾಷ್ಟ್ರೀಯ ಸಹಕಾರ ವರ್ಷ. ವಿಶ್ವಸಂಸ್ಥೆಯು ಜಗತ್ತಿನಲ್ಲಿ ಸಹಕಾರ ಸಂಸ್ಥೆಗಳ ಸಾಧಕ –ಬಾದಕಗಳನ್ನು ಕುರಿತು ಚರ್ಚಿಸಲು ಎರಡನೇ ಬಾರಿಗೆ 2025 ನೇ ವರ್ಷವನ್ನು ಅಂತಾರಾಷ್ಟ್ರೀಯ ಸಹಕಾರ ವರ್ಷವೆಂದು ಘೋಷಿಸಿದೆ. ಈ ಹಿಂದೆ 2012ನ್ನು ಅಂತಾರಾಷ್ಟ್ರೀಯ ಸಹಕಾರ ವರ್ಷವೆಂದು ಆಚರಿಸಲಾಗಿತ್ತು.

2025 ರ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಸಹಕಾರಿ ವರ್ಷದ ಧ್ಯೇಯ ವಾಕ್ಯವು "ಸಹಕಾರಿ ಸಂಸ್ಥೆಗಳು ಉತ್ತಮ ಜಗತ್ತನ್ನು ನಿರ್ಮಿಸಬಲ್ಲವು" ಎಂಬುದಾಗಿದ್ದು, ಈ ಧ್ಯೇಯ ಸಹಕಾರ ಸಂಸ್ಥೆಗಳು ಅನೇಕ ಜಾಗತಿಕ ಸವಾಲುಗಳನ್ನು ಎದುರಿಸಲು ಸಹಾಯಕವಾಗಿದೆ ಹಾಗೂ 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಕಾರ್ಯಗತಗೊಳಿಸುವಲ್ಲಿ ಪೂರಕವಾಗಿದೆ ಎಂಬುದನ್ನು ಸೂಚಿಸುತ್ತದೆ.

"ಇತಿಹಾಸದಲ್ಲಿ ಎರಡನೇ ಬಾರಿಗೆ ವಿಶ್ವಸಂಸ್ಥೆಯು ಸಹಕಾರಿ ಸಂಸ್ಥೆಗಳಿಗೆ ಅಂತರರಾಷ್ಟ್ರೀಯ ವರ್ಷವನ್ನು ಮೀಸಲಿಟ್ಟಿರುವ ಉದ್ದೇಶ. ಎಲ್ಲಾ ಸಮುದಾಯಗಳ ಬಗ್ಗೆ ಕಾಳಜಿಯಿಂದ ಹಾಗೂ ಆಧುನಿಕ ತಂತ್ರಜ್ಞಾನ ಯುಗದಲ್ಲಿ ನಾಗರೀಕರ ಅನೇಕ ಅಗತ್ಯತೆಗಳನ್ನು ಸಹಕಾರಿ ವಲಯ ಪೂರೈಸುವ ಮೂಲಕ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿರುವುದರ ಕುರಿತು ಮನವರಿಕೆ ಮಾಡಬಹುದಾಗಿದೆ. ಇದರ ಹಿನ್ನಲೆಯಲ್ಲಿ, ಈಗಾಗಲೇ ಎಲ್ಲಾ ಸದಸ್ಯ ರಾಷ್ಟ್ರಗಳು, ವಿಶ್ವಸಂಸ್ಥೆ ಮತ್ತು ಸಂಬಂಧಿತ ಪಾಲುದಾರರು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಸಂಸ್ಥೆಗಳ ಕೊಡುಗೆಯನ್ನು ಸ್ಮರಿಸಲು ಅನೇಕ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿವೆ. ಅವುಗಳಲ್ಲಿ ಪ್ರಮುಖವಾಗಿ ಸ್ವಚ್ಛತಾ ಕಾರ್ಯಕ್ರಮ, ಗಿಡ ನೆಡುವ ಕಾರ್ಯಕ್ರಮ, ರೇಡಿಯೋ, ಟಿ.ವಿ.ಭಾಷಣಗಳು, ವಸ್ತುಪ್ರದರ್ಶನಗಳು, ರಾಜ್ಯಮಟ್ಟದ ವಿಚಾರ ಸಂಕಿರಣಗಳು, ಯುವ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು, ಸಹಕಾರ ವಲಯದ ಸುಧಾರಣೆಗಳ ಕುರಿತು ವಿಭಾಗಮಟ್ಟದ ಇಲಾಖಾ ಅಧಿಕಾರಿಗಳ ತರಬೇತಿ ಕಾರ್ಯಕ್ರಮಗಳ ವ್ಯವಸ್ಥೆ ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಆಚರಿಸಲು ರಾಜ್ಯಮಟ್ಟದ ಸಮಿತಿಯನ್ನು ಸಹ ರಚಿಸಲಾಗಿದೆ.

**ಸಹಕಾರಿಗಳು, ಸಹಕಾರ ಸಂಸ್ಥೆಗಳು ಅಂತಾರಾಷ್ಟ್ರೀಯ ಸಹಕಾರ ವರ್ಷದ ಆಚರಣೆಯನ್ನು ಯಶಸ್ವಿಗೊಳಿಸಲು ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳ ಮನವಿ ಮಾಡುತ್ತದೆ.**

## ಚಿಕ್ಕಮಗಳೂರಿನಲ್ಲಿ ಸಹಕಾರ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆ

# ಶೀಘ್ರವೇ ಗ್ರಾಮ ಪಂಚಾಯಿತಿಗೊಂದು ಸಹಕಾರ ಸಂಘ ಸ್ಥಾಪನೆ: ಸಚಿವ ಕೆ.ಎನ್. ರಾಜಣ್ಣ



**ಚಿಕ್ಕಮಗಳೂರು:** 'ಸಹಕಾರ ಸಂಸ್ಥೆಗಳನ್ನು ರಾಜಕೀಯ ಮುಕ್ತವಾಗಿ, ಜಾತ್ಯತೀತ ಹಾಗೂ ಪಕ್ಷಾತೀತವಾಗಿ ಕಟ್ಟುವ ಮೂಲಕ ಆರ್ಥಿಕವಾಗಿ ಲಾಭದ ಹಾದಿಗೆ ಕೊಂಡೊಯ್ಯಬೇಕು' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ನಗರದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಸಹಕಾರ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶೀಘ್ರವೇ ಗ್ರಾಮ ಪಂಚಾಯಿತಿಗೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ನೋಂದಾಯಿಸಿ ಆರ್ಥಿಕ ಶಿಸ್ತು ಕಾಪಾಡಿಕೊಂಡು ರೈತರಿಗೆ ಉಪಯೋಗ ಆಗುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದರು.

2025ರ ಮಾರ್ಚ್ ಅಂತ್ಯಕ್ಕೆ ಬಾಕಿ ಇರುವ ಅದಿಭಾರ ಅರ್ಜಿ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಹಣ ವಸೂಲಿ ಮಾಡಲು ಸಂಸ್ಥೆಗಳ ಅಧಿಕಾರಿಗಳು, ಆಡಳಿತ ಮಂಡಳಿ ಕ್ರಮ ಕೈಗೊಂಡು ಆರ್ಥಿಕ ಹೊರೆ ಕಡಿಮೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಆರ್ಥಿಕವಾಗಿ ಹಿನ್ನಡೆಯಾಗಿರುವ ಸಹಕಾರಿ ಸಂಸ್ಥೆಗಳನ್ನು ಗಮನಿಸಿ ಅವುಗಳನ್ನು ಪುನಃಶ್ಚೇತನಗೊಳಿಸಲು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು. ಮೇಲ್ವಿಚಾರಕರು, ಅಭಿವೃದ್ಧಿ ಅಧಿಕಾರಿಗಳು ಆಗಾಗ ಸಭೆಗಳನ್ನು ನಡೆಸಿ ಸಹಕಾರ ಸಂಸ್ಥೆಗಳಲ್ಲಿ ನಡೆಯುವ ಆರ್ಥಿಕ ವ್ಯವಹಾರಗಳನ್ನು ಗಮನಿಸಬೇಕು. ಆಗ ಆರ್ಥಿಕ ಶಿಸ್ತು ಕಾಪಾಡಿಕೊಳ್ಳಬಹುದು.ಯಶಸ್ವಿನಿ ಯೋಜನೆ ಶೇ. 100 ರಷ್ಟು ಗುರಿ ಸಾಧಿಸಬೇಕು. ಪ್ರತೀ ವರ್ಷ ಎಲ್ಲ ಬ್ಯಾಂಕ್, ಸಂಘಗಳ ಲೆಕ್ಕಪರಿಶೋಧನೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದರು.

ಹಣಕಾಸು ವಿಚಾರದಲ್ಲಿ ಡಿಸಿಸಿ ಬ್ಯಾಂಕ್‌ಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಕಾಲ ಕಾಲಕ್ಕೆ ನೀಡುವ ಯೋಜನೆಗಳನ್ನು ಸರಿಯಾದ ಸಮಯಕ್ಕೆ ಅರ್ಹ ಫಲಾನುಭವಿಗಳಿಗೆ ನೀಡಬೇಕು. ರಾಜ್ಯ ಸರ್ಕಾರದ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಸಮರ್ಪಕವಾಗಿ ಜಾರಿ ಮಾಡಬೇಕು. ಅದೇ ರೀತಿ ಕಾನೂನು ಇತಿಮಿತಿಯನ್ನು ಅರಿತು ವಸೂಲಿ ಕ್ರಮಗಳನ್ನು ಕೈಗೊಳ್ಳಬೇಕು.ಲೆಕ್ಕಪತ್ರಗಳ ಮಾಹಿತಿಗಳನ್ನು ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಸೈಬರ್ ಅಪರಾಧಗಳು ನಡೆಯದಂತೆ ಎಚ್ಚರ ವಹಿಸಬೇಕು ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಬಿ.ಸಿ. ಲೋಕಪ್ಪಗೌಡ ಅವರು ಮಾತನಾಡಿ, 'ನಬಾರ್ಡ್ ಯೋಜನೆಯಲ್ಲಿ ಕೃಷಿ ಕ್ಷೇತ್ರಕ್ಕೆ ಶೇ. 58ರಷ್ಟು ಮೊತ್ತ ಕಡಿಮೆಯಾಗಿ ಹಲವು ಗೊಂದಲಗಳು ತಲೆದೋರಿವೆ. ಅದರ ನಿವಾರಣೆಗೆ ರಾಜ್ಯ ಸರ್ಕಾರ ಕ್ರಮಕೈಗೊಳ್ಳಬೇಕು. ಡಿಸಿಸಿ ಬ್ಯಾಂಕ್ ರೂ. 1426.79 ಕೋಟಿ ಠೇವಣಿ ಹೊಂದಿದ್ದರೆ, ರೂ. 1348.80 ಕೋಟಿ ಸಾಲ ವಿತರಣೆ ಮಾಡಿದೆ' ಎಂದು ವಿವರಿಸಿದರು.

ಡಿಸಿಸಿ ಬ್ಯಾಂಕ್ ಜಿಲ್ಲೆಯಲ್ಲಿ ರೈತರು ಮತ್ತು ಗ್ರಾಹಕರ ವಿಶ್ವಾಸ ಗಳಿಸಿದೆ. ಬ್ಯಾಂಕ್ ಆಡಳಿತ ಮಂಡಳಿಯ ಬದ್ಧತೆಯ ಮಾರ್ಗದರ್ಶನದಿಂದ ನಿರಂತರ ಲಾಭಗಳಿಸುತ್ತಿದೆ. ಪ್ರಸ್ತುತ 'ಎ' ಗ್ರೇಡ್‌ನಲ್ಲಿ ಗುರುತಿಸಿಕೊಂಡು ಪ್ರಸಕ್ತ ಸಾಲಿನಲ್ಲಿ ರೂ. 6.58 ಕೋಟಿ ಲಾಭ ಗಳಿಸಿದೆ ಎಂದು ತಿಳಿಸಿದರು.

ಸಭೆಯಲ್ಲಿ ಶಾಸಕರಾದ ಟಿ.ಡಿ.ರಾಜೇಗೌಡ, ಎಚ್.ಡಿ.ತಮ್ಮಯ್ಯ, ಸಹಕಾರಿ ಮುಖಂಡರಾದ ಹಳಸೆ ಶಿವಣ್ಣ, ರಾಮಜ್ಜ, ಪರಮೇಶ್ವರಪ್ಪ, ಬಸವರಾಜಪ್ಪ, ಸಚಿವರ ವಿಶೇಷಕರ್ತವ್ಯಾಧಿಕಾರಿ ಜಿ.ಎಸ್.ರಮಣ್ಣರೆಡ್ಡಿ, ಕಾಸ್ಕಾರ್ಡ್ ಬ್ಯಾಂಕ್ ನಿರ್ದೇಶಕರಾದ ಮಹೇಶ್, ಸಹಕಾರ ಸಂಘಗಳ ಉಪನಿಬಂಧಕರಾದ ಡಾ. ತೇಜಸ್ವಿನಿ, ಬ್ಯಾಂಕ್ ವ್ಯವಸ್ಥಾಪಕ ತಿಮ್ಮಯ್ಯ ಇತರರು ಉಪಸ್ಥಿತರಿದ್ದರು.



## ಬುದ್ಧನೆಂದರೆ ಅರಿವು, ಪ್ರಜ್ಞೆ, ಜಾಗೃತಿ

# ಸಿದ್ದಾರ್ಥ ಬುದ್ಧನಾದ ಕಥೆ

ಲೋಕ ಜ್ಞಾನವಿಲ್ಲದ ಸಿದ್ದಾರ್ಥನು ಬುದ್ಧನಾಗುವುದು ಅಷ್ಟು ಸುಲಭದ ಮಾತಲ್ಲ. ಬುದ್ದನಾಗುವ ಹಂತದಲ್ಲಿ ಆತ ಅನುಭವಿಸಿದ ಯಾತನೆ, ನೋವು, ಹಸಿವು ಸಹಿತ ನಾನಾ ಸಂಕಷ್ಟಗಳ ದೊಡ್ಡ ಪಟ್ಟಿಯೇ ಇದೆ.

ಹುಟ್ಟಿನಿಂದ ಐಷಾರಾಮಿ ಜೀವನ ಸಾಗಿಸುತ್ತಿದ್ದ ಸಿದ್ದಾರ್ಥ ಮನೆ ಬಿಟ್ಟಾಗ ಆತನ ಮುಂದೆ ಇದ್ದ ಒಂದೇ ಗುರಿಯಂದರೆ ಭಗವಂತನ ಸಾಕ್ಷಾತ್ಕಾರ, ಜ್ಞಾನೋದಯದ ಮೂಲಕ ಜೀವನದ ಅಂತಿಮ ಸತ್ಯದ ಅರಿವು ಮೂಡಿಸಿ ಮಾನವ ಕುಲವನ್ನು ನೋವಿನ ಸಂಕೋಲೆಯಿಂದ ಮುಕ್ತಗೊಳಿಸುವುದು. ಅದಕ್ಕಾಗಿ ಸಿದ್ದಾರ್ಥ ಕಂಡ ಕಂಡ ಸಾಧು, ಸಂತರು ಗುರುಗಳನ್ನು ಭೇಟಿ ಮಾಡುತ್ತಾನೆ, ಸಾಕ್ಷಾತ್ಕಾರಕ್ಕಾಗಿ ಮಾರ್ಗದರ್ಶನ ಪಡೆದು. ಅವರು ತೋರಿದ ಮಾರ್ಗ ಚಾಚು ತಪ್ಪದೆ ಪಾಲಿಸುತ್ತಾನೆ. ಆದರೆ ಯಾವುದರಿಂದಲೂ ಆತ ಗುರಿ ತಲುಪಲು ಸಾಧ್ಯವಾಗುವುದಿಲ್ಲ. ಈ ನಡುವೆ ಒಬ್ಬ ಹಿರಿಯ ಸಾಧುಗಳು ಸಿದ್ದಾರ್ಥನಿಗೆ ಉಪವಾಸ ಹಾಗೂ ದೇಹ ದಂಡಿಸುವುದರಿಂದ ಭಗವಂತನ ಸಾಕ್ಷಾತ್ಕಾರವಾಗಿ ಜ್ಞಾನೋದಯ ವಾಗುತ್ತದೆ ಎಂಬ ಸಲಹೆ ನೀಡುತ್ತಾರೆ. ಸಂತರ ಸಲಹೆಯಂತೆ ಮೂರು ಹೊತ್ತು ಭೋಜನ ಸ್ವೀಕರಿಸುತ್ತಿದ್ದ ಸಿದ್ದಾರ್ಥ ದಿನ ಕಳೆದಂತೆ ಮೂರರ ಬದಲು ಎರಡು ನಂತರ ದಿನಕ್ಕೆ ಒಂದು ಊಟ ಹಾಗೆ ದಿನಕಳೆದಂತೆ ಒಂದು ಊಟದಲ್ಲೂ ಕಡಿಮೆ ಮಾಡುತ ಕೊನೆಗೆ ದಿನಕ್ಕೆ ಒಂದು ಅನ್ನದ ಅಗಳು ಸೇವಿಸುತ್ತಾ ಕಠಿಣ ದೇಹ ದಂಡನೆಯಲ್ಲಿ ತೊಡಗಿಸಿಕೊಳ್ಳುತ್ತಾನೆ.ಎಷ್ಟೆ ಕಷ್ಟವಾದರೂ ಜೀವನದ ಅಂತಿಮ ಸತ್ಯ ಅರಿಯ ಬೇಕು ಎಂಬ ಹಠ.

ಹೀಗೆ ಸಿದ್ದಾರ್ಥನು ತಿಂಗಳುಗಟ್ಟಲೆ ಕೇವಲ ಅನ್ನದ ಒಂದು ಅಗಳು ತಿನ್ನುತ್ತ ಕಠಿಣ ವ್ರತ ಮಾಡಿದರಿಂದ ಅವನ ದೇಹ ಸಂಪೂರ್ಣ ಕೃಶವಾಗುತ್ತದೆ. ಹೊಟ್ಟೆ ಬೆನ್ನಿಗೆ ಅಂಟಿಕೊಳ್ಳುತ್ತದೆ, ದೇಹ ಮೂಳೆ ಚಕ್ಕಳವಾಗಿ ನಾಲ್ಕು ಹೆಜ್ಜೆಯಿಡುವುದರಲ್ಲಿಯೇ ಆಯಾ ತಪ್ಪಿ ಬಿಳುವಂತಾಗುತ್ತದೆ, ಬಹಿರ್ದೆಸೆಗೆ ಕುಳಿತರೆ ನಿತ್ರಾಣದಿಂದ ತಲೆ ನೆಲಕ್ಕೆ ಬಾಗುತ್ತದೆ. ದೇಹದ ರಕ್ತ ಬಸಿದುಹೋಗಿ ಎಲುಬಿನ ಗೂಡಾಗುತ್ತದೆ. ಬುದ್ದಗಯಾದಲ್ಲಿ ಹರಿಯುವ ನೀರಂಜನಾ ನದಿಯ ಮೊಳಕಾಲುದ್ದದ ನೀರಿನಲ್ಲೂ ನಾಲ್ಕು ಹೆಜ್ಜೆ ಎತ್ತಿ ಇಡುವುದೆ ಅಸಾಧ್ಯವಾಗುತ್ತದೆ.

### ಅಮೃತ ಘಳಿಗೆಯಲ್ಲಿಯೇ ಜ್ಞಾನೋದಯ

ಇದೇ ಸ್ಥಿತಿ ಮುಂದುವರಿದರೆ ಜ್ಞಾನೋದಯ ಆಗುವ ಮೊದಲೇ ನಾನು ಇಹಲೋಕ ತ್ಯೆಜಿಸಬೇಕಾಗುತ್ತದೆ ಎಂಬ ಭಯ ಸಿದ್ದರ್ಥನಿಗೆ ಕಾಡುತ್ತದೆ. ಆತ ಮೋಕ್ಷ, ಜ್ಞಾನೋದಯ, ಪಾಪ, ಪುಣ್ಯ, ಭಗವಂತನ ಸಾಕ್ಷಾತ್ಕಾರ ಪಡೆಯುವ ಆಸೆಗಳನ್ನು ಬಿಟ್ಟು, ಕೃಷವಾಗಿ ಸಾಯುವ ದೇಹಕ್ಕೆ ಆಹಾರ ನೀಡಬೇಕು ಎಂಬ ದೃಢ ಸಂಕಲ್ಪ ಮಾಡುತ್ತಾನೆ. ಇದೇ

**" ಬುದ್ಧನೆಂದರೆ ಪ್ರಜ್ಞೆ, ಬುದ್ಧನೆಂದರೆ ಅರಿವು, ಬುದ್ಧನೆಂದರೆ ಜಾಗೃತಿ. ಬುದ್ಧನೆಂದರೆ ಶಾಂತಿ ಮತ್ತು ಅಹಿಂಸೆ. ಬುದ್ಧ ಧರ್ಮ ಜಗತ್ತಿನ ಏಕೈಕ ವೈಜ್ಞಾನಿಕ ಧರ್ಮ "**

ಯೋಚನೆಯಲ್ಲಿ ಬೋಧಿ ವೃಕ್ಷದ ಕೆಳಗಡೆ ವಿಶ್ರಾಂತಿ ಪಡೆಯುತ್ತಾನೆ. ತಲೆಯ ಮೇಲಿನ ಬಹುದೊಡ್ಡ ಭಾರ ಇಳಿಸಿ ಹಗುರವಾದ ಅನುಭವವಾಗುತ್ತದೆ.

ಅಂದು ಹುಣ್ಣಿಮೆಯ ರಾತ್ರಿ ಆ ಊರಿನ ಸುಜಾತ ಹೆಸರಿನ ಶೂದ್ರ ಹೆಣ್ಣು ಮಗಳು ತಾನು ವೃಕ್ಷ ದೇವತೆಗೆ ಹೊತ್ತಿದ ಹರಕೆ ತೀರಿಸಲು ಪಾಯಸವನ್ನು ಬೋಧಿ ವೃಕ್ಷಕ್ಕೆ ಅರ್ಪಿಸುತ್ತಾಳೆ.

ಬೋಧಿ ವೃಕ್ಷದ ಕೆಳಗೆ ಹಸಿವಿನಿಂದ ನಿತ್ರಾಣನಾಗಿ ವಿಶ್ರಾಂತಿ ಪಡೆಯತ್ತಿದ್ದ ಸಿದ್ದಾರ್ಥ, ಸುಜಾತ ಹರಕೆಯ ರೂಪದಲ್ಲಿ ವೃಕ್ಷ ದೇವತೆಗೆ ಅರ್ಪಿಸಿದ ಪಾಯಸವನ್ನು ಸಂತೃಪ್ತಿಯಿಂದ ಸೇವಿಸುತ್ತಾನೆ. ಅವನಿಗೆ ಪುನರ್ಜನ್ಮ ಬಂದಂತಾಗುತ್ತದೆ.

ಆ ಹುಣ್ಣಿಮೆಯ ರಾತ್ರಿ ಹಸಿವಿನಿಂದ ಮುಕ್ತನಾದ ಸಿದ್ಧಾರ್ಥ, ಸಂಸಾರ, ಜ್ಞಾನೋದಯ, ಮೋಕ್ಷ, ಸಾಮ್ರಾಜ್ಯ, ಸ್ವರ್ಗ ಸಹಿತ ಎಲ್ಲಾ ವ್ಯಾಮೋಹಗಳನ್ನು ತೊರೆದು ನಿಶ್ಚಿಂತೆಯಿಂದ ಬೋಧಿ ವೃಕ್ಷದ ಕೆಳಗೆ ನಿದ್ದೆ ಹೋಗುತ್ತಾನೆ. ಬೆಳಗಿನ ಜಾವದ ಕೊನೆಯ ನಕ್ಷತ್ರ ಮುಳುಗುವ ಹೊತ್ತಿಗೆ ಸಿದ್ದಾರ್ಥನಿಗೆ ಮಿಂಚು ಪ್ರಜ್ವಲಿಸಿದಂತಾಗುತ್ತದೆ ಅಲ್ಲೆ ಆ ಅಮೃತ ಘಳಿಗೆಯಲ್ಲಿಯೇ ಜ್ಞಾನೋದಯವಾಗುತ್ತದೆ. ಆತ ಸಂಪೂರ್ಣವಾಗಿ ಸಿದ್ಧಾರ್ಥನಿಂದ ಬುದ್ಧನಾಗುತ್ತಾನೆ. ಆ ಮೂಲಕ ಜಗತ್ತಿನಲ್ಲಿ ಒಂದು ದೊಡ್ಡ ಇತಿಹಾಸ ಸೃಷ್ಟಿಯಾಗುತ್ತದೆ.

## ಬುದ್ದ ಕಂಡು ಕೊಂಡ ಸತ್ಯ

ಹೊರಗೆಲ್ಲೂ ಹುಡುಕದೆ ಅಂತರಾತ್ಮದ ಕಣ್ಣು ತೆರೆಯುವುದರಿಂದ ಮಾತ್ರ ಸತ್ಯದ ಸಾಕ್ಷಾತ್ಕಾರವಾಗುತಗತದೆ. ಆ ಮೂಲಕ ಜ್ಞಾನೋದಯವಾಗುತ್ತದೆ ಎಂಬ ಅಂತಿಮ ಸತ್ಯವನ್ನು ಬುದ್ಧ ಕಂಡುಕೊಳ್ಳುತ್ತಾನೆ.

ಆದ್ದರಿಂದಲೇ ಬುದ್ದನೆಂದರೆ ಪ್ರಜ್ಞೆ, ಬುದ್ದನೆಂದರೆ ಅರಿವು, ಬುದ್ದನೆಂದರೆ ಜಾಗೃತಿ. ಬುದ್ದನೆಂದರೆ ಶಾಂತಿ ಮತ್ತು ಅಹಿಂಸೆ. ಬುದ್ದ ಧರ್ಮ ಜಗತ್ತಿನ ಏಕೈಕ ವೈಜ್ಞಾನಿಕ ಧರ್ಮ.



ಬುದ್ದ, ಸ್ವರ್ಗ–ನರಕ, ಪಾಪ–ಪುಣ್ಯ, ಹೋಮ–ಹವನ, ಯಜ್ಞ–ಯಾಗ, ಪೂಜೆ–ಪುನಸ್ಕಾರದ ಹೆಸರಿನಲ್ಲಿ ಧರ್ಮದ ವ್ಯಾಪಾರೀಕರಣ ಮಾಡಲಿಲ್ಲ. ಆಸೆ ತೋರಿಸಿ, ಹೆದರಿಸಿ, ಬಲಪ್ರಯೋಗ ಮಾಡಿ ಬುದ್ದ ಧರ್ಮಪ್ರಸಾರ ಮಾಡಲಿಲ್ಲ ಜಗತ್ತಿನಾದ್ಯಂತ ಜನಸಾಮಾನ್ಯರು ಸ್ವಯಂಪ್ರೇರಿತರಾಗಿ ಬೌದ್ಧ ಧರ್ಮವನ್ನು ಪ್ರೀತಿಯಿಂದ ಅಪ್ಪಿಕೊಂಡರು ಮತ್ತು ಅದರಲ್ಲಿಯೇ ಮುಕ್ತಿಯ ಮಾರ್ಗ ಕಂಡುಕೊಂಡರು.

ಅತ್ಯಾಧುನಿಕ ಸಾರಿಗೆ, ಸಂಪರ್ಕ ಸೌಲಭ್ಯಗಳು ಇಲ್ಲದ ಕಾಲದಲ್ಲಿ ಬೌದ್ಧ ಧರ್ಮ ಜಗತ್ತಿನ ಹಲವಾರು ದೇಶಗಳಿಗೆ ಪ್ರಸಾರ ವಾಯಿತು. ಜಗತ್ತಿನ ಕೋಟ್ಯಾಂತರ ಜನರು ಆ ಧರ್ಮವನ್ನು ಅಪ್ಪಿಕೊಂಡರು.

ಇಂದು ಚೀನಾ, ಜಪಾನ್, ಶ್ರೀಲಂಕಾ, ದಕ್ಷಿಣ ಕೊರಿಯಾ, ಉತ್ತರ ಕೊರಿಯಾ, ಕಾಂಬೋಡಿಯಾ, ಥೈಲ್ಯಾಂಡ್, ಭೂತಾನ್, ತೈವಾನ್, ಮ್ಯಾನ್ಮಾರ್, ಸಿಂಗಾಪುರ, ಹಾಂಗ್ ಕಾಂಗ್, ಟಿಬೇಟ್, ವಿಯೆಟ್ನಾಂ ಹಾಗೂ ಮಲೇಷಿಯಾ ದೇಶಗಳು ಬೌದ್ದ ಧರ್ಮಪಾಲಿಸುತ್ತಿವೆ. ಈ ದೇಶಗಳು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಮುಂದುವರಿದ ದೇಶಗಳೆಂಬ ಹೆಗ್ಗಳಿಕೆ ಗಳಿಸಿವೆ.

ಧರ್ಮ ಧರ್ಮಗಳ ನಡುವೆ ಶ್ರೇಷ್ಠತೆಗಾಗಿ ನಡೆಯುತ್ತಿರುವ ಸಂಘರ್ಷಗಳನ್ನು ತಪ್ಪಿಸಿ ಎಲ್ಲರೂ ಸೌಹಾರ್ದ ಮತ್ತು ಸಾಮರಸ್ಯತೆಯಿಂದ ಬದುಕು ಕಟ್ಟಿಕೊಂಡು ವಿಶ್ವಶಾಂತಿ ಸ್ಥಾಪನೆಯಾಗಬೇಕಾದರೆ ಬುದ್ದನ ಅಹಿಂಸಾ ತತ್ವದ ವಿಚಾರ ಧಾರೆಗಳು ಹಿಂದೆಂದಿಗಿಂತಲೂ ಇಂದು ಜಗತ್ತಿಗೆ ಹೆಚ್ಚು ಅಗತ್ಯವಾಗಿದೆ.

– ಮಂಜುನಾಥ್ ನಾಯ್ಕ್, ಹಿರಿಯ ಪತ್ರಕರ್ತರು.
ಬೆಂಗಳೂರು.

### ಮೇ 1: ಕಾರ್ಮಿಕರ ದಿನಾಚರಣೆ

# ವಿಶ್ವ ಕಾರ್ಮಿಕ ಶಕ್ತಿಗೊಂದು ನಮನ



ದೇಶ ಕಟ್ಟುವ ಕಾಯಕದಲ್ಲಿ ಹಗಲಿರುಳು ದುಡಿಯುತ್ತಿರುವ ಕೋಟ್ಯಾಂತರ ಸಂಖ್ಯೆಯ ಕಾರ್ಮಿಕ ಸಮುದಾಯಕ್ಕೆ ಯಾವುದೇ ಜಾತಿ, ಧರ್ಮ, ಭಾಷೆ, ಬಣ್ಣ, ಪ್ರಾಂತ್ಯಗಳ ಭೇದವಿಲ್ಲ. ಕಾಯಕದಲ್ಲಿಯೇ ಕೈಲಾಸ ಕಾಣುವ ಕಾರ್ಮಿಕ ವರ್ಗಕ್ಕೆ ದುಡಿಮೆಯೆ ದೇವರು ದುಡಿಮೆ ಧರ್ಮ ಹಾಗೂ ದುಡಿಮೆಯೆ ಸರ್ವಸ್ವವೂ ಆಗಿದ್ದು, ಈ ಸಮುದಾಯಕ್ಕೆ ದುಡಿಯಲು ಉತ್ತಮ ಸೌಲಭ್ಯ ಕಲ್ಪಿಸಿಕೊಡುವುದರ ಜೊತೆಗೆ ವೈಜ್ಞಾನಿಕ ರೀತಿಯಲ್ಲಿ ವೇತನ ನಿಗದಿ ಪಡಿಸುವುದು ಹಾಗೂ ಅವರ ಕುಟುಂಬಕ್ಕೆ ಸಾಮಾಜಿಕ ಭದ್ರತೆ ಕಲ್ಪಿಸುವುದು ನಾಗರಿಕ ಸರ್ಕಾರಗಳ ಜವಾಬ್ದಾರಿಯಾಗಿದೆ.

ಕಾರ್ಮಿಕರು ಹಗಲು ರಾತ್ರಿ ನೋಡುವುದಿಲ್ಲ, ಬಿಸಿಲು ಮಳೆ ಗಾಳಿಗೂ ಜಗ್ಗುವುದಿಲ್ಲ, ಕಠಿಣ ಪರಿಶ್ರಮ, ಸಮರ್ಪಣಾ ಭಾವಕ್ಕೆ ಇವರು ಸಾಕ್ಷಿ... ಕಷ್ಟವನ್ನು ನುಂಗಿ ಖುಷಿ ಹಂಚುವವರು ಕಾರ್ಮಿಕರು... ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಬಹಳ ಹಿರಿದು. ಕಾರ್ಮಿಕರ ಶ್ರಮದಲ್ಲಿ ದೇಶದ ಅಭಿವೃದ್ಧಿಯಡಗಿದೆ... ಈ ಶ್ರಮಜೀವಿಗಳೇ ಇಲ್ಲದ ದೇಶವನ್ನು ಊಹಿಸಲು ಸಾಧ್ಯವಿದೆಯೇ...? ಖಂಡಿತಾ ಇಲ್ಲ. ತಮ್ಮ ದುಡಿಮೆಯಿಂದಲೇ ತಮ್ಮ ಕುಟುಂಬವನ್ನು ಮುನ್ನಡೆಸುವ ಕಾರ್ಮಿಕರು ತಾವು ದುಡಿಯುತ್ತಿರುವ ಸಂಸ್ಥೆಯ ಬೆಳವಣಿಗೆಗೂ ಕಾರಣವಾಗುತ್ತಾರೆ.

ಇಂತಹ ಶ್ರಮಜೀವಿಗಳ ಕೆಲಸವನ್ನು ಗೌರವಿಸುವ, ಇವರ ಶ್ರಮವನ್ನು ಗುರುತಿಸುವ, ಇವರ ಕಷ್ಟಗಳನ್ನು ಸ್ಮರಿಸುವ ಸಲುವಾಗಿ ಮೇ 1 ರಂದು ಅಂತಾರಾಷ್ಟ್ರೀಯ ಕಾರ್ಮಿಕರ ದಿನ ಎಂದು ಆಚರಿಸಲಾಗುತ್ತದೆ. ಇದನ್ನು ವರ್ಕರ್ಸ್ ಡೇ, ಮೇ ಡೇ, ಲೇಬರ್ ಡೇ ಎಂದೂ ಕರೆಯಲಾಗುತ್ತದೆ. 1886ರಲ್ಲಿ ಅಮೇರಿಕಾದಲ್ಲಿ ಮೊದಲ ಬಾರಿಗೆ ಕಾರ್ಮಿಕರ ದಿನವನ್ನು ಆಚರಿಸಲಾಯಿತು. ದಿನಕ್ಕೆ ಕಾರ್ಮಿಕರಿಗೆ ಎಂಟು ಗಂಟೆ ಕೆಲಸದ ಅವಧಿಯನ್ನು ನಿಗದಿ ಮಾಡಬೇಕು ಎಂಬ ಆಗ್ರಹದೊಂದಿಗೆ ಶುರುವಾದ ಚಳವಳಿಗೆ ಯಶಸ್ಸು ಸಿಕ್ಕಿತ್ತು. ಇದೇ ಹೋರಾಟದ ಕಿಚ್ಚಿನಲ್ಲಿ ಉದಯಿಸಿದ್ದೇ ಕಾರ್ಮಿಕರ ದಿನಾಚರಣೆ. ಭಾರತದಲ್ಲಿ ಈ ಆಚರಣೆ ಶುರುವಾಗಿದ್ದು 1923ರಲ್ಲಿ. ವಿಶ್ವದ ನಾನಾ ಭಾಗಗಳಲ್ಲಿ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ.

ಜಗತ್ತು ಇಂದು ಇಷ್ಟೊಂದು ವೇಗವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಹೊಂದಲು ವಿಜ್ಞಾನ ತಂತ್ರಜ್ಞಾನದ ಕೊಡುಗೆಯ ಜೊತೆಗೆ ಕಾರ್ಮಿಕ ಸಮುದಾಯದ ಕೊಡುಗೆ ಅಪಾರವಾದದ್ದು. ಇಂದು ವಿವಿಧ ಕ್ಷೇತ್ರದದಲ್ಲಿ ಕೌಶಲ್ಯಹೊಂದಿದ ಕಾರ್ಮಿಕರಿಗೆ ಜಗತ್ತಿನಾದ್ಯಂತ ಅಪಾರ ಬೇಡಿಕೆ ಇದೆ. ಮುಂದುವರಿದ ಎಷ್ಟೋ ರಾಷ್ಟ್ರಗಳು ಕೌಶಲ್ಯ ಹೊಂದಿದ ಕಾರ್ಮಿಕರ ಕೊರತೆ ಎದುರಿಸುತ್ತಿದ್ದು ಇದು ಆ ದೇಶಗಳ ಆರ್ಥಿಕ ಅಭಿವೃದ್ಧಿಯ ಮೇಲೆ ಅಡ್ಡ ಪರಿಣಾಮ ಬೀರಿದೆ.

### ಭಾರತದಲ್ಲಿ ದುಡಿಯುವ ವರ್ಗದ ಜನಸಂಖ್ಯೆ 98 ಕೋಟಿ

ಭಾರತದಲ್ಲಿ ಈಗ (2024ರಲ್ಲಿ) 15ರಿಂದ 64 ವರ್ಷ ವಯಸ್ಸಿನ 98 ಕೋಟಿಯಷ್ಟು ಜನರು ಇದ್ದಾರೆ ಎಂದು ವಿಶ್ವಸಂಸ್ಥೆಯು ಅಂದಾಜಿಸಿದೆ. ಇದು ವಿಶ್ವದಲ್ಲೇ ಹೆಚ್ಚು. ವಿಶ್ವಸಂಸ್ಥೆಯು ಎಲ್ಲಾ ದೇಶಗಳ ಜನಸಂಖ್ಯಾ ದತ್ತಾಂಶಗಳನ್ನು ಸಂಗ್ರಹಿಸಲು ಆರಂಭಿಸಿದ್ದು 1950ರಲ್ಲಿ. ಅಲ್ಲಿಂದ ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ಜನಸಂಖ್ಯಾ ಅಂದಾಜನ್ನು ಬಿಡುಗಡೆ ಮಾಡುತ್ತದೆ. ಆನಂತರ ಆಯಾ ನೈಜ ಜನಸಂಖ್ಯೆಯ ದತ್ತಾಂಶಗಳಿಗೆ ತಾಳೆ ಮಾಡಿ, ನೈಜ ಜನಸಂಖ್ಯೆಯ ದತ್ತಾಂಶಗಳನ್ನು ವರದಿಗೆ ಸೇರಿಸುತ್ತದೆ. ಹೀಗೆ ವಿಶ್ವಸಂಸ್ಥೆಯು ಸಿದ್ಧಪಡಿಸಿರುವ ಭಾರತದ ಜನಸಂಖ್ಯಾ ವರದಿಯಲ್ಲಿ, 'ಭಾರತದ ಉತ್ಪಾದಕ ಜನಸಂಖ್ಯೆ'ಯ ದತ್ತಾಂಶಗಳೂ ಇವೆ. 1950ರಲ್ಲಿ ಭಾರತದಲ್ಲಿ ಈ ವಯಸ್ಸಿನ ಒಟ್ಟು 22 ಕೋಟಿ ಜನರಿದ್ದರು. 2024ರಲ್ಲಿ ಈ ಜನಸಂಖ್ಯೆಯು 98 ಕೋಟಿಗೆ ಏರಿಕೆಯಾಗಿದೆ. ಮುಂದಿನ ದಶಕಗಳಲ್ಲೂ ಈ ಸಂಖ್ಯೆ ಏರಿಕೆಯಾಗಲಿದೆ. 2050ರ ವೇಳೆಗೆ ಈ ವಯಸ್ಸಿನ ಜನರ ಸಂಖ್ಯೆ 113 ಕೋಟಿಗೆ ಏರಿಕೆಯಾಗಲಿದೆ ಎಂದು ವಿಶ್ವ ಸಂಸ್ಥೆ ಅಂದಾಜಿಸಿದೆ.

ಕಾರ್ಮಿಕರ ಶಕ್ತಿಯೇ ದೇಶದ ನಿಜವಾದ ಸಂಪತ್ತು.

–ಸವಿತಾನಾಯ್ಕ್, ಬೆಂಗಳೂರು

## ಬಡಗಬೆಟ್ಟು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ

# 2024-25ನೇ ಸಾಲಿನಲ್ಲಿ ರೂ. 19.37 ಕೋಟಿ ಲಾಭ

## ತಂತ್ರಜ್ಞಾನಾಧಾರಿತ ಸೇವೆಯಲ್ಲಿ ಮುಂಚೂಣಿ : ಜಯಕರಶೆಟ್ಟಿ ಇಂದ್ರಾಳಿ



**ಉಡುಪಿ :** ಉಡುಪಿಯ ಬಡಗಬೆಟ್ಟು ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯು 2024–25ನೇ ಸಾಲಿನಲ್ಲಿ ರೂ. 2,935 ಕೋಟಿ ವಾರ್ಷಿಕ ವಹಿವಾಟು ನಡೆಸಿ ರೂ. 19.37 ಕೋಟಿ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷರಾದ ಜಯಕರ ಶೆಟ್ಟಿ ಇಂದ್ರಾಳಿಯವರು ತಿಳಿಸಿದ್ದಾರೆ.

**ಸಂಘದ ಮುಂದಿನ ಗುರಿ :** ಮುಂದಿನ ವರದಿ ವರ್ಷದಲ್ಲಿ ರೂ. 800 ಕೋಟಿ ಠೇವಣಿ, ರೂ.700 ಕೋಟಿ ಹೊರಬಾಕಿ ಸಾಲ ಅಂದರೆ ಒಟ್ಟು 1,500 ಕೋಟಿ ರೂ. ವ್ಯವಹಾರ ನಡೆಸುವ ಗುರಿ ಹೊಂದಿದ್ದು, ಉಡುಪಿಯ ಹೃದಯ ಭಾಗದಲ್ಲಿ ಈಗಾಗಲೇ ಖರೀದಿಸಿರುವ 1 ಎಕರೆ ಆಸ್ತಿಯಲ್ಲಿ ಅಂದಾಜು ರೂ.10.00 ಕೋಟಿ ವೆಚ್ಚದಲ್ಲಿ "ಸಹಕಾರ ಸೌಧ" ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗಿದೆ ಎಂದರು.

ಪ್ರತಿಯೊಂದು ಶಾಖೆಗಳಲ್ಲಿ ಶಾಖಾ ಸಲಹಾ ಸಮಿತಿಗಳನ್ನು ರಚನೆ ಮಾಡಿದ್ದು, ಆಯಾ ಸಮಿತಿ ಸದಸ್ಯರ ಮೇಲ್ವಿಚಾರಣೆಯಲ್ಲಿ ಪ್ರತಿಯೊಂದು ಶಾಖೆಗಳಲ್ಲಿ ಹೊಸ ಹೊಸ ಯೋಜನೆಗಳನ್ನು ಕಾರ್ಯಗತಗೊಳಿಸುವ ಚಿಂತನೆಯನ್ನು ಹಾಕಿಕೊಂಡಿರುತ್ತೇವೆ ಎಂದು ತಿಳಿಸಿದರು.

ಸಂಘವು ವರ್ಷಾಂತ್ಯಕ್ಕೆ ಇದ್ದಂತೆ 21,519 ಸದಸ್ಯರಿಂದ 4.83 ಕೋಟಿ ರೂ. ಪಾಲು ಬಂಡವಾಳ ಹೊಂದಿದೆ. ಒಟ್ಟು ರೂ.573 ಕೋಟಿ ಠೇವಣಿ ಸಂಗ್ರಹಿಸಿದ್ದು, ಕಳೆದ ಸಾಲಿಗಿಂತ ಶೇ.12.45 ಏರಿಕೆ ಕಂಡಿದೆ. ಸದಸ್ಯರಿಗೆ ಗೃಹನಿರ್ಮಾಣ, ವಾಹನ ಖರೀದಿಯ ಬಗ್ಗೆ, ಜಮೀನು ಖರೀದಿ ಮತ್ತು ಅಭಿವೃದ್ಧಿಯ ಬಗ್ಗೆ, ವಾಣಿಜ್ಯ ಸಂಕೀರ್ಣ ಹಾಗೂ ವಸತಿ ಸಮುಚ್ಚಯ ನಿರ್ಮಾಣದ ಬಗ್ಗೆ, ಸ್ವಉದ್ಯೋಗಕ್ಕಾಗಿ, ವಿದ್ಯಾಭ್ಯಾಸ, ಮದುವೆ, ಚಿನ್ನಾಭರಣಗಳ ಈಡಿನ ಮೇಲೆ ಹಾಗೂ ಮನೆವಾರ್ತೆಗಳಿಗೆ ಸೂಕ್ತ ದಾಖಲೆಗಳನ್ನು ಪಡೆದುಕೊಂಡು ಸಾಲವನ್ನು ವಿತರಿಸುತ್ತಿದ್ದು ವರದಿ ವರ್ಷಾಂತ್ಯಕ್ಕೆ 477 ಕೋಟಿ ರೂ. ಸದಸ್ಯರ ಹೊರಬಾಕಿ ಸಾಲ ಇದ್ದು, ಕಳೆದ ಸಾಲಿಗಿಂತ ಶೇ.18.62 ಏರಿಕೆ ಕಂಡಿದೆ. 95.18 ಕೋಟಿ ರೂ. ನಿಧಿಗಳು, 229.73 ಕೋಟಿ ರೂ. ಹೂಡಿಕೆಗಳು ಇದ್ದು, ರೂ.673.20 ಕೋಟಿ ರೂ. ದುಡಿಯುವ ಬಂಡವಾಳವನ್ನು ಹೊಂದಿರುತ್ತದೆ. ಸಂಘವು ತನ್ನ ಕಾರ್ಯಕ್ಷೇತ್ರದಲ್ಲಿ 11 ಶಾಖೆಗಳನ್ನು ಹೊಂದಿದ್ದು ಈ ಪೈಕಿ 8 ಶಾಖೆಗಳು ಸಂಘದ ಸ್ವಂತ ನಿವೇಶನದಲ್ಲಿರುತ್ತದೆ. 12ನೇ ಶಾಖೆಯಾಗಿ ಕುಂದಾಪುರದ ಹೃದಯಭಾಗದಲ್ಲಿ ಸ್ವಂತ ಕಛೇರಿಯನ್ನು ಈಗಾಗಲೇ ಖರೀದಿಸಲಾಗಿದ್ದು, ಸದ್ಯದಲ್ಲೇ ಗ್ರಾಹಕರ ಸೇವೆಗೆ ಲಭ್ಯವಾಗಲಿದೆ ಎಂದರು.

ಸತತವಾಗಿ 2 ಬಾರಿ ರಾಷ್ಟ್ರ ಪ್ರಶಸ್ತಿ, 9 ಬಾರಿ ರಾಜ್ಯ ಮಟ್ಟದ ಪ್ರಶಸ್ತಿ, 18 ಬಾರಿ ಅವಿಭಜಿತ ದ.ಕ ಜಿಲ್ಲಾ ಪ್ರಶಸ್ತಿಗಳನ್ನು ಪಡೆದು ಯಶಸ್ವೀ ಕ್ರೆಡಿಟ್ ಸೊಸೈಟಿಯಾಗಿ ಸಂಘವು ಗುರುತಿಸಿಕೊಂಡಿದೆ. ಕೇವಲ ವ್ಯವಹಾರ ಮಾಡಿ ಲಾಭ ಗಳಿಸುವ ದೃಷ್ಟಿಯನ್ನು ಮಾತ್ರ ಇಟ್ಟುಕೊಳ್ಳದೆ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು ಬಂದಿರುತ್ತದೆ.

**ಚೇತನಾ ಮೊಬೈಲ್ ಆ್ಯಪ್ :** ಡಿಜಿಟಲೀಕರಣದ ಹೆಜ್ಜೆಯಾಗಿ ಅಭಿವೃದ್ಧಿಪಡಿಸಿದ "ಚೇತನಾ ಮೊಬೈಲ್ ಆ್ಯಪ್" ಮೂಲಕ ಗ್ರಾಹಕರು ತಾವಿರುವಲ್ಲಿಯೇ ತಮ್ಮ ಖಾತೆಯಿಂದ ಐಎಂಪಿಎಸ್/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಮೊಬಲಗು ವರ್ಗಾವಣೆ, ಆರ್‌ಡಿ ಹಾಗೂ ಸಾಲ ಖಾತೆಗಳಿಗೆ ಮೊಬಲಗು ವರ್ಗಾಯಿಸುವುದು, ಸಂಘದ ನೂತನ ಯೋಜನೆಯ ಕುರಿತಾದ ಮಾಹಿತಿಗಳನ್ನೂ ಪಡೆಯಬಹುದಾಗಿದ್ದು, ಸದ್ರಿ ಆ್ಯಪ್ ಬಗ್ಗೆ ಬಳಕೆದಾರರಿಂದ ಉತ್ತಮ ಸ್ಪಂದನೆ ದೊರೆತಿರುತ್ತದೆ. ಈ ಆ್ಯಪ್‌ನ ಪ್ರಯೋಜನ ಪಡೆಯುವ ಬಗ್ಗೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಮೀಪದ ಶಾಖೆಗೆ ತೆರಳಿ ಮಾಹಿತಿ ಪಡೆಯುವಂತೆ ಅವರು ತಿಳಿಸಿದರು.

ದೈನಿಕ ಠೇವಣಿ ಸಂಗ್ರಹಣೆಯನ್ನು ಮೊಬೈಲ್ ಆ್ಯಪ್ (ಪಿಗ್ಮಿ ಮೊಬೈಲ್ ಆ್ಯಪ್) ಮೂಲಕ ನಡೆಸಲಾಗುತ್ತಿದೆ. ಸಂಘದ ಎಲ್ಲಾ ಶಾಖೆಗಳಲ್ಲಿ ಗ್ರಾಹಕರಿಗೆ ವಿವಿಧ ರೀತಿಯ ಸೇವೆ ನೀಡುವ ಸಲುವಾಗಿ ಈಗಾಗಲೇ ಸೇಫ್ ಲಾಕರ್ ಸೌಲಭ್ಯ, ಇ–ಸ್ಟಾಂಪಿಂಗ್, ಪಾನ್ ಕಾರ್ಡ್, ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಸೇವಾ ಸೌಲಭ್ಯ, ಮನಿ ಟ್ರಾನ್ಸ್‌ಫರ್ ಸೌಲಭ್ಯ, ಲಂಬಾರ್ಡ್ ಆರೋಗ್ಯ ಕಾರ್ಡ್, ಮಣಿಪಾಲ ಆರೋಗ್ಯ ಕಾರ್ಡ್, ಆರೋಗ್ಯ ವಿಮೆ, ಸಾಮಾನ್ಯ ವಿಮೆ, "0" ಬ್ಯಾಲೆನ್ಸ್ ವಿದ್ಯಾನಿಧಿ ಖಾತೆ, ಮಿಸ್ಡ್‌ಕಾಲ್ ಸರ್ವಿಸ್, ಉಚಿತ ಎಸ್.ಎಂ.ಎಸ್ ಸೌಲಭ್ಯ ನೀಡುತ್ತಿದ್ದು, ಸಂಘದ ಎಲ್ಲಾ ಮಾಹಿತಿ, ಅಪ್‌ಡೇಟ್ಸ್‌ಗಳಿಗೆ www.badagabettusociety.com ಜಾಲತಾಣಕ್ಕೆ ಭೇಟಿ ನೀಡಬಹುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಜಾರ್ಜ್ ಸಾಮ್ಯುಯೆಲ್, ಆಡಳಿತ ಮಂಡಲಿಯ ಸದಸ್ಯರಾದ ಸಂಜೀವ ಕಾಂಚನ್, ಪುರುಷೋತ್ತಮ ಪಿ. ಶೆಟ್ಟಿ, ಉಮಾನಾಥ ಎಲ್, ವಿನಯ ಕುಮಾರ್ ಟಿ.ಎ, ಪದ್ಮನಾಭ ನಾಯಕ್, ಸೈಯದ್ ಅಬ್ದುಲ್ ರಜಾಕ್, ಸದಾಶಿವ ನಾಯ್ಕ್, ಮನೋಹರ ಎಸ್. ಶೆಟ್ಟಿ, ಸಾಧು ಸಾಲ್ಯಾನ್, ಜಯಾ ಶೆಟ್ಟಿ, ಗಾಯತ್ರಿ ಎಸ್. ಭಟ್, ಪ್ರಧಾನ ವ್ಯವಸ್ಥಾಪಕರಾದ ರಾಜೇಶ್ ವಿ. ಶೇರಿಗಾರ್, ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಪ್ರವೀಣ್ ಕುಮಾರ್ ಉಪಸ್ಥಿತರಿದ್ದರು.

## ಮಹಿಳೆಯರ ಸ್ವಾವಲಂಬನೆಗೆ ಆದ್ಯತೆ : 3 ದಶಕಗಳ ಸಾರ್ಥಕ ಸೇವೆ

# ಪ್ರಗತಿ ಪಥದಲ್ಲಿ ಹುಣಸಗಿಯ ಶ್ರೀ ನೀಲಕಂಠೇಶ್ವರ ಮಹಿಳಾ ಪತ್ತಿನ ಸಹಕಾರ ಸಂಘ ನಿ.,

ಕರ್ನಾಟಕದ ಸಹಕಾರ ಚಳವಳಿಯ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ವಿಶೇಷವಾದುದು. ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನಲ್ಲಿ ಪ್ರಾರಂಭವಾದ ಶ್ರೀ ನೀಲಕಂಠೇಶ್ವರ ಮಹಿಳಾ ಪತ್ತಿನ ಸಹಕಾರ ಸಂಘವು ತನ್ನ ಸಾರ್ಥಕವಾದ 29 ವರ್ಷಗಳನ್ನು ಪೂರೈಸಿದ್ದು, ಮಹಿಳೆಯರ ಆರ್ಥಿಕ ಅಗತ್ಯಗಳಿಗೆ ನೆರವಾಗುವುದರ ಮೂಲಕ ಸ್ವಂತ ಉದ್ದಿಮೆ, ವಿವಿಧ ಆರ್ಥಿಕ ಚಟುವಟಿಕೆಗಳಿಗೆ ಸಹಕಾರಿಯಾಗಿ ಮಹಿಳಾ ಸ್ವಾವಲಂಬನೆಗೆ ಹೆಚ್ಚಿನ ಆದ್ಯತೆ ನೀಡುತ್ತಾ ಬಂದಿದೆ.

ಮಹಿಳೆಯರು ಸ್ವಾವಲಂಬಿಯಾದರೆ ಆ ಕುಟುಂಬ ನೆಮ್ಮದಿಯಾಗಿ, ಸುಖಮಯವಾಗಿ ಜೀವನ ಸಾಗಿಸುತ್ತದೆ ಎಂಬ ಮಾತಿದೆ. ಮಹಿಳೆಯರು ದೈನಂದಿನ ಕೆಲಸವನ್ನು ಮಾಡಿ, ಪುರುಷರ ದುಡಿಮೆಯೊಂದಿಗೆ ತಮ್ಮ ದುಡಿಮೆ ಸೇರಿಸಿ ಕುಟುಂಬದ ಆರ್ಥಿಕ ಸ್ಥಿತಿ ಹೆಚ್ಚಿಸಿಕೊಳ್ಳುತ್ತಿದ್ದಾರೆ. ದುಡಿಯುವ ಮಹಿಳೆಯರಿಗೆ ಸಹಕಾರ ಸಂಸ್ಥೆಗಳು ಆರ್ಥಿಕ ಸಹಾಯ ಮಾಡುತ್ತಾ ಅವರನ್ನು ಆರ್ಥಿಕವಾಗಿ ಸದೃಢಗೊಳಿಸುವ ಕೆಲಸವನ್ನು ಮಾಡುತ್ತಿವೆ. ಅವುಗಳಿಗೆ ನಿದರ್ಶನವಾಗಿ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಶ್ರೀ ನೀಲಕಂಠೇಶ್ವರ ಮಹಿಳಾ ಪತ್ತಿನ ಸಹಕಾರ ಸಂಘವು ಆಶಾಕಿರಣವಾಗಿದೆ.

**ಸಂಘದ ಆರಂಭ :** ಈ ಸಹಕಾರ ಸಂಘವನ್ನು 1995–96ರ ಸಾಲಿನಲ್ಲಿ ನೋಂದಣಿ ಮಾಡಲಾಗಿದೆ. ಸಂಘದ ಸಂಸ್ಥಾಪಕರು ಲಿಂಗೈಕ್ಯ ಮಹದೇವಪ್ಪ ಸಾಹುಕಾರ. ಎನ್ ಬಳಿ ಹುಣಸಗಿ ಮತ್ತು ದಿ. ಈರಮ್ಮ ರಾಮಣ್ಣ ದೊರಿ ಇವರು ಸಂಘದ ಪ್ರಥಮ ಅಧ್ಯಕ್ಷರಾಗಿ ಮುನ್ನಡೆಸಿರುತ್ತಾರೆ. ಪ್ರಸ್ತುತ ಈ ಸಂಘದ ಅಧ್ಯಕ್ಷರಾದ ಕವಿತಾ ಗುರಲಿಂಗಪ್ಪ ರೇವಡಿ ಮುನ್ನೆಡೆಸುತ್ತಿದ್ದು. ಈ ಸಂಘವು ಹುಣಸಗಿ ತಾಲ್ಲೂಕಿನಾದ್ಯಂತ ಸಹಕಾರ ಸೇವೆಯನ್ನು ಮಹಿಳೆಯರಿಗೆ ನೀಡುತ್ತಿದೆ.

ಸಂಘವು ಮೊದಲು ಒಟ್ಟು 385 ಸದಸ್ಯರಿಂದ 385100 ರೂ. ಷಷೇರು ಬಂಡವಾಳದೊಂದಿಗೆ ಆರಂಭವಾಗಿದ್ದು, ಪ್ರಸ್ತುತ 1399 ಸದಸ್ಯರ ಬಲದೊಂದಿಗೆ 7468770 ರೂ. ಬಂಡವಾಳ ಹೊಂದುವ ಮೂಲಕ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿದೆ.

**ಸಂಘದ ಉದ್ದೇಶಗಳು:** ಸಂಘದ ಸದಸ್ಯರುಗಳಲ್ಲಿ ಆರ್ಥಿಕ ಹಿತಾಸಕ್ತಿಗಳನ್ನು ವೃದ್ಧಿಸುವುದು ಮತ್ತು ಮಿತವ್ಯಯ, ಉಳಿತಾಯ ಹಾಗೂ ಪರಸ್ಪರ ಸಹಾಯಕ್ಕೆ ಉತ್ತೇಜನ ನೀಡುವುದು. ಸದಸ್ಯರ ಆರ್ಥಿಕ ಉನ್ನತಿಗಾಗಿ ಹಣಕಾಸು ಪೂರೈಕೆಯ ಯೋಜನೆಯನ್ವಯ ಹಾಗೂ ಉಪವಿಧಿಗಳಲ್ಲಿ ತಿಳಿಸಿದ ಪ್ರಕಾರ ನಿಧಿಯನ್ನು ಸಂಗ್ರಹಿಸುವುದು. ಮತ್ತು ಮಹಿಳೆಯರನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಧೃಡಗೋಳಿಸುವುದು ಸಂಘದ ಉದ್ದೇಶವಾಗಿದೆ.




**ಸಂಘದಿಂದ ಸದಸ್ಯರಿಗೆ ನೀಡುವ ಸೌಲಭ್ಯಗಳು :** ಸಾಮಾನ್ಯ ಸಾಲ, ವಾಹನ ಸಾಲ, ನಗದು ಪತ್ತಿನ ಸಾಲ, ಸ್ಥಿರಾಸ್ತಿಯಾಧಾರ ಸಾಲ, ಯಂತ್ರೋಪಕರಣ ಹೊಂದಲು ಸಾಲ, ವ್ಯಾಪಾರಕ್ಕಾಗಿ ಸಾಲ, ಜಮೀನು ಸಾಲ, ಖಾಯಂ ಠೇವಣಿಯ ಆಧಾರ ಸಾಲ, ವಿಕಾಸ ನಗದು ಪತ್ರ ಠೇವಣಿಯಾಧಾರ ಸಾಲ, ಮುದ್ದತ್ ಠೇವಣಿಯಾಧಾರ ಸಾಲ ಹೀಗೆ ವಿವಿಧ ರೀತಿಯ ಸಾಲವನ್ನು ಸಂಘದಿಂದ ಸದಸ್ಯರಿಗೆ ನೀಡಲಾಗುತ್ತಿದೆ.

**ಸಾಲ ಮತ್ತು ಮುಂಗಡಗಳು:** ಸಂಘದ ಸದಸ್ಯರಿಗೆ ಅವರ ಅಗತ್ಯತೆಗೆ ಮತ್ತು ನಿಯಮಗಳ ವ್ಯಾಪ್ತಿಯೊಳಗೆ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಸಹಕಾರ ಸಂಘದ ಸೇವೆ ಗುರುತಿಸಿ ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟದ ವಾರ್ಷಿಕ ಮಹಾಸಭೆಯಲ್ಲಿ ಅತ್ಯುತ್ತಮ ಸಹಕಾರ ಸಂಘ ಎಂದು ಗೌರವಿಸಿದೆ.

ಹುಣಸಗಿ ಪಟ್ಟಣದ ಗಣ್ಯವ್ಯಾಪಾರಿ ಹಾಗೂ ಸಹಕಾರಿ ಧುರೀಣರಾಗಿದ್ದ ದಿ॥ ಶ್ರೀ ಮಹಾದೇವಪ್ಪ, ಎನ್. ಸಾಹುಬಳಿ ಇವರು ಅತ್ಯಂತ ದಿ॥ ಶ್ರೀ ಮಹಾದೇವಪ್ಪ, ಎನ್. ಸಾಹುಬಳಿ ಇವರು ಅತ್ಯಂತ ನಿಷ್ಠುರಿಗಳಾಗಿ, ಶ್ರದ್ಧೆ ಹಾಗೂ ನಿಷ್ಠೆಯಿಂದ ನಮ್ಮ ಸಂಘದ ಏಳ್ಗೆಯ ಜವಾಬ್ದಾರಿಯನ್ನು ಹೆಗೆಲಿಗೇರಿಸಿಕೊಂಡು ಸಹಕಾರ ಮನೋಭಾವದಿಂದೆ ಎಲ್ಲರನ್ನು ಒಗ್ಗೂಡಿಕೊಂಡು ತಮ್ಮ ಮುಂದಾತ್ವದಲ್ಲಿ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ನೇರ ಹಾಗೂ ದಿಟ್ಟ ನಡೆಯುಳ್ಳವರಾಗಿದ್ದ ಶ್ರೀಯುತರು ಆಡಳಿತ ಮಂಡಳಿಯ ಸರ್ವಸದಸ್ಯರೊಂದಿಗೆ ಸ್ನೇಹ, ಸೌಹಾರ್ದತೆ, ನಡೆ–ನುಡಿಗಳಿಂದ ಮುನ್ನಡೆಸಿದ ಖ್ಯಾತಿ ಇವರದ್ದು. ಸಂಘವು ಈ ಮಟ್ಟಕ್ಕೆ ಬೆಳೆಯಲು ಶ್ರೀಯುತರು ಕಾರಣರಾಗಿದ್ದಾರೆ.



**ಮೈಸೂರು:** ಮೈಸೂರು ಮರ್ಚೆಂಟ್ ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷರಾದ ಸಿ.ವಿ.ಸೋಮಶೇಖರ್ ರವರನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ರವರು ಅಭಿನಂದಿಸಿದರು. ಬ್ಯಾಂಕಿನ ಉಪಾಧ್ಯಕ್ಷರಾದ ಮಹೇಶ್ ಹಾಗೂ ಜನತಾ ಬಜಾರ್ ನಿರ್ದೇಶಕರಾದ ಎನ್ ಮಂಜುನಾಥ್ ರವರು ಹಾಜರಿದ್ದರು.



ದಿನಾಂಕ:22.03.2025 ರಿಂದ 24.03.2025 ರವರೆಗೆ National centre for Co-operative Education New Delhi (NCCE) ತೋಟಗಾರಿಕೆ ಬೆಳೆಗಾರರ ಉತ್ಪನ್ನ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿಯಮಿತ ಶಿಕಾರಿಪುರ ಮತ್ತು ಶ್ರೀ ಬಸವೇಶ್ವರ ಸಹಕಾರ ಒಕ್ಕೂಟ ಸಂಘ ನಿಯಮಿತ ಶಿಕಾರಿಪುರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಶಿಕಾರಿಪುರ ತಾಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಹಾಗೂ ಮಾರಾಟ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗೆ ಎರಡು ದಿನದ ನಾಯಕತ್ವ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ಹಾಗೂ ಒಂದು ದಿನದ ಅಧ್ಯಯನ ಪ್ರವಾಸವನ್ನು ಏರ್ಪಡಿಸಲಾಗಿತ್ತು. ತರಬೇತಿ ಕಾರ್ಯಕ್ರಮವನ್ನು ಶಿಕಾರಿಪುರದ ಅರ್ಬನ್ ಬ್ಯಾಂಕ್‌ನ ರಜತ ಭವನದ ಸಭಾಂಗಣದಲ್ಲಿ ನಡೆಸಲಾಯಿತು. ಈ ತರಬೇತಿ ಕಾರ್ಯಕ್ರಮವನ್ನು ದಿನಾಂಕ:22.03.2025 ರಂದು ಶನಿವಾರ ಬೆಳಗ್ಗೆ 10.30ಕ್ಕೆ ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕಾ ಮಹಾಮಂಡಳದ ಅಧ್ಯಕ್ಷರು ಹಾಗೂ ಪತ್ತಿನ ಮಹಾಮಂಡಳದ ನಿರ್ದೇಶಕರು ಆದ ಡಾ.ಬಿ.ಡಿ.ಭೂಕಾಂತ್ ರವರು ಉದ್ಘಾಟಿಸಿದರು.



ಡಾ. ಬಿ.ಡಿ. ಭೂಕಾಂತ ನಿರ್ದೇಶಕರು

ರಾಜ್ಯ ಮಟ್ಟದ ಕಾಯಕಯೋಗಿ–2025 ಪ್ರಶಸ್ತಿಗೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಶ್ರೀ ಬಿ.ಡಿ. ಭೂಕಾಂತ್‌ರವರು ಆಯ್ಕೆಯಾಗಿರುತ್ತಾರೆ. ಪ್ರಶಸ್ತಿ ಪ್ರದಾನ ಸಮಾರಂಭವು ಬಾಗಲಕೋಟೆ ಜಿಲ್ಲೆಯ ರಬಕವಿ ಶ್ರೀ ಶಿವದಾಸಿಮಯ್ಯ ಸಮುದಾಯ ಭವನದಲ್ಲಿ ನಡೆಯಲಿದೆ